ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 15 ಏಪ್ರಿಲ್ 12. 1981 ಬೆಲೆ : 50 ಪೈಸೆ

ಸಂಪಾದಕೀಯ

ಆರ್.ಎಸ್.ಎಸ್. ವಿಷಬೀಜ

ತೆಲ್ಲಿಚೇರಿಯ ರೈಲ್ವೇ ನಿಲ್ದಾಣದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಸಕ ಕಾಂ. ಎ. ವಿ. ರಾಜಗೋಪಾಲನ್ ಅವರ ಮೇಲೆ ಆರ್.ಎಸ್.ಎಸ್.ನವರು ಬಾಂಬುದಾಳಿಮಾಡಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಆರ್.ಎಸ್.ಎಸ್. ಮಧ್ಯೆ ಮತ್ತೊಂದು ರಕ್ತಪಾತದ ಆಟ ಪ್ರಾರಂಭಮಾಡಿದ್ದಾರೆ. ಈ ಆಘಾತ ಕೃತ್ಯಗಳು ಈಗಾಗಲೇ 10 ಜನರ ಪ್ರಾಣಗಳನ್ನು ಬಲಿತೆಗೆದುಕೊಂಡಿದೆ.

ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರಕಾರವನ್ನು ಉರುಳಿಸುವ ಕೆಲಸದಲ್ಲಿ ಸಕ್ರಿಯವಾಗಿ ಕೆಲಸಮಾಡುತ್ತಿರುವ ಪಟ್ಟಭದ್ರ ಹಿತಾಸಕ್ತಿಗಳು ಈ ಹಿಂಸಾಚಾರಕ್ಕೆ ಮಾರ್ಕ್ಸ್‌ವಾದಿಗಳೇ ಕಾರಣವೆಂದು ಪ್ರಚಾರಮಾಡುತ್ತಿದ್ದಾರೆ. "ಅಪಾಯಕಾರಿ ಪಥ" ಎಂಬ ಶೀರ್ಷಿಕೆಯಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯವರು ಒಂದು ಸಂಪಾದಕೀಯವನ್ನು ಬರೆದು 'ಈ ಹಿಂಸಾಚಾರ ಕೇರಳದ ರಾಜಕಾರಣದಲ್ಲಿ ಮಾಮೂಲಿಸ್ಥಿತಿಯಾಗಿದೆಯೆಂದು' ಮಾರ್ಕ್ಸ್‌ವಾದಿಗಳ ಮೇಲೆ ಅಪವಾದ ಹೊರಿಸಿದ್ದಾರೆ. ಇದುವರೆಗೂ ಸರ್ವಾಧಿಕಾರಿ ಶಕ್ತಿಗಳನ್ನು ವಿರೋಧಿಸುತ್ತಾ ಬಂದ ಇಂಡಿಯನ್ ಎಕ್ಸ್‌ಪ್ರೆಸ್, ಈಗ ಸರ್ವಾಧಿಕಾರಿ ಶಕ್ತಿಗಳನ್ನು ಬೆಂಬಲಿಸುವುದರಿಂದ ಅದು ನಿಜವಾದ ಅಪಾಯಕಾರಿ ಪಥದಲ್ಲಿ ಸಿಕ್ಕಿಹಾಕಿಕೊಂಡಿದೆ. ಇದು ಯಾವ ಮಟ್ಟಕ್ಕೆ ಮುಟ್ಟಿದೆಯೆಂದರೆ ಸಿ.ಪಿ.ಐ.ನವರನ್ನು ಎಡ ಮತ್ತು ಪ್ರಜಾಪ್ರಭುತ್ವ ರಂಗದಿಂದ ದೂರಮಾಡುವ ಮಟ್ಟಕ್ಕೆ ಈ ಪತ್ರಿಕೆಯು ಬಲೆಬೀಸುತ್ತಿದೆ.

ಭಾರತೀಯ ಜನತಾಪಾರ್ಟಿಯ ಕಾರ್ಯದರ್ಶಿಯಾದ ಶ್ರೀ ಎಲ್. ಕೆ. ಅಡ್ವಾನಿಯವರು ಕೊಚ್ಚಿಯಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ ಪ. ಬಂಗಾಳದ ವಾಮಪಂಥೀಯ ಸರಕಾರವನ್ನು ಉರುಳಿಸಲು ಪ್ರಯತ್ನ ಮಾಡುತ್ತಿರುವ ಶ್ರೀಮತಿಗಾಂಧೀಯವರ ಸರ್ವಾಧಿಕಾರಿ ಪ್ರಯತ್ನವನ್ನು ಕಟುವಾಗಿ ಟೀಕಿಸಿದ್ದಾರೆ. ಅದೇ ಸಂದರ್ಭದಲ್ಲಿ ಅವರು "ಮಾರ್ಕ್ಸ್‌ವಾದಿಗಳ ರಾಷ್ಟ್ರದ್ರೋಹಿಗಳು; ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡುವುದಕ್ಕೆ ನಂಬಲು ಅರ್ಹರಲ್ಲ" ಎಂದಿದ್ದಾರೆ. ಒಂದು ವೇಳೆ ಇವರ ಮಾತುಗಳನ್ನು ಗಹನವಾಗಿ ತೆಗೆದುಕೊಂಡರೆ ಅವಕ್ಕೆ ಯಾವುದೇ ರೀತಿಯ ಪುಷ್ಟಿ ಇಲ್ಲ. ಏಕೆಂದರೆ ಇವರ ಪಕ್ಷವು ಕಾಂಗ್ರೆಸ್ಸಿನೊಂದಿಗೆ ಶಾಮೀಲಾಗಿರುವುದು. ಕ್ರಮಬದ್ಧವಾಗಿ ಆಯ್ಕೆಯಾಗಿರುವ ಕೇರಳ ಸರಕಾರದ ವಿರುದ್ಧ ಕತ್ತಿಮಸೆಯುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

(ಕಡೇ ಪುಟ ನೋಡಿ)

ಮತ್ತೆ ಗೋಲಿಬಾರ್

ಸೋಮವಾರ (6-4-1981) ತಮ್ಮ ಬೇಡಿಕೆಗಳಿಗೋಸ್ಕರ ಕಳೆದ ಸುಮಾರು 25 ದಿನಗಳಿಂದ ಶಾಂತಿಯುತ ಹೋರಾಟ ಮಾಡುತ್ತಿದ್ದ ನಿಪ್ಪಾಣಿಯ ರೈತರ ಮೇಲೆ ಗೋಲಿಬಾರ್ ಮಾಡಿ 10 ಜನರನ್ನು ಬಲಿತೆಗೆದುಕೊಳ್ಳಲಾಗಿದೆ. ಈ ಸಂಖ್ಯೆ ಸರಕಾರದ ಅಧಿಕೃತ ಸಂಖ್ಯೆ. ಸುಮಾರು 16ಕ್ಕೂ ಹೆಚ್ಚು ಜನರು ಸತ್ತಿರುವರೆಂದು ಕೆಲವು ಪ್ರತ್ಯಕ್ಷದರ್ಶಿಗಳ ಅಭಿಪ್ರಾಯ.

ನಿಪ್ಪಾಣಿ ಸುತ್ತಮುತ್ತಲಿನ ಹಳ್ಳಿಗಳ ಸುಮಾರು ಐವತ್ತು ಸಾವಿರ ಬೆಳೆಗಾರರು ಬೆಳೆಯುವ ಮುಖ್ಯ ಬೆಳೆ ತಂಬಾಕು. ನಿಪ್ಪಾಣಿಯ ತಂಬಾಕು ತುಂಬಾ ಪ್ರಸಿದ್ಧ. ಈ ರೈತರನ್ನು ಕೆಲವೇ ಜನರು ವರ್ತಕರು ಅಪಾರವಾಗಿ ಶೋಷಿಸುತ್ತಿದ್ದರು. ತಂಬಾಕಿನ ಬೆಲೆ ವರ್ತಕರು ನಿಗದಿಪಡಿಸಿದ್ದೇ. ಮಾರಾಟವಾದ ಮೇಲೆ ದೊರಕುವ ಬೆಲೆ ಬೆಳೆಯಲು ತಗಲುವ ವೆಚ್ಚಕ್ಕಿಂತ ಕಡಿಮೆ. ಈ ಅನ್ಯಾಯದಿಂದ ರೋಸಿ ಕೊನೆಗೂ ರೈತರು ಹೋರಾಟಕ್ಕೆ ಟೊಂಕ ಕಟ್ಟಿದರು. ಮಹಾರಾಷ್ಟ್ರದ ರೈತ ಮುಖಂಡ ಶ್ರೀ ಶರದ್‌ಜೋಶಿ ನಿಪ್ಪಾಣಿಯ ರೈತ ಹೋರಾಟಕ್ಕೆ ಮುಂದಾಳಾಗಿ ನಿಂತರು.

ಮಾರ್ಚ್ 14 ರಿಂದ ಪ್ರಾರಂಭವಾಗಿದ್ದ ಈ ಹೋರಾಟ ಬಗೆಹರಿಸಲು ಸರಕಾರದ ಪರವಾಗಿ ಯಾವುದೇ ಪ್ರಯತ್ನ ನಡೆಯಲಿಲ್ಲ. ರಾಜ್ಯ ಸರಕಾರದ ಪರವಾಗಿ ಸಂಧಾನಕ್ಕೆ ತೆರಳಿದವರು ಪೋಲೀಸ್ ಅಧಿಕಾರಿಗಳು. ಈ ಹೋರಾಟಕ್ಕೆ ಬೇರೆ ಬಣ್ಣ ಕೊಡುವ ದುಷ್ಟ ಪ್ರಯತ್ನಗಳೂ ನಡೆದವು. ಗಡಿ, ಭಾಷೆ ಮುಂತಾದ ಭಾವನೆಗಳನ್ನು ಕೆರಳಿಸುವ ಪ್ರಯತ್ನಗಳೂ ನಡೆದವು. ರೈತರು ಜಗ್ಗದೇ ಪಟ್ಟು ಹಿಡಿದು ಹೋರಾಟ ಮುಂದುವರೆಸಿದ್ದರು. ಹೋರಾಟದ ಕಾರ್ಯಕ್ರಮದ ಅಂಗವಾಗಿ "ರಾಸ್ತಾ ರೋಕೋ" ಚಳುವಳಿಯೂ ಶಾಂತವಾಗಿಯೇ ಇತ್ತು. ಈ ಹೋರಾಟದಲ್ಲಿ ಹೆಂಗಸರು-ಮಕ್ಕಳು ಪಾಲ್ಗೊಂಡಿದ್ದರು.

ಹೋರಾಟವನ್ನು ಸದೆಬಡೆಯಲು ವಿಶೇಷ ಪೋಲೀಸ್ ಪಡೆಯನ್ನು ರವಾನಿಸಿ ಶ್ರೀ ಶರದ್‌ಜೋಶಿ ಮತ್ತಿತರ ಮುಖಂಡರನ್ನು ಬಂಧಿಸಲಾಯಿತು. ಇದರಿಂದ ರೈತರು ಸ್ವಾಭಾವಿಕವಾಗಿಯೇ ಉದ್ರಿಕ್ತರಾದರು. ಉದ್ರಿಕ್ತರಾಗುವಂತೆ ಪ್ರಚೋದಿಸಿ ಗೋಲಿಬಾರ್ ನಡೆಸಲಾಯಿತು.

ಸರಕಾರದ ಈ ಬರ್ಬರ ಕೃತ್ಯವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪರವಾಗಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರು ತೀವ್ರವಾಗಿ ಖಂಡಿಸಿ ನ್ಯಾಯಾಂಗ ವಿಚಾರಣೆಗೆ ಆಗ್ರಹಪಡಿಸಿದ್ದಾರೆ. ಬಂಧಿತರನ್ನು ಕೂಡಲೇ ಬಿಡುಗಡೆಮಾಡಬೇಕೆಂದು ಒತ್ತಾಯಪಡಿಸಿದ್ದಾರೆ.

(ಕಡೇ ಪುಟ ನೋಡಿ)

ಅಸ್ಸಾಂ - ನಿಜವಾದ ವಿಚಾರ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾದ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್ ಅವರು ಈ ಹೇಳಿಕೆಯನ್ನು ಮಾರ್ಚಿ 20ರಂದು ಕೊಟ್ಟಿದ್ದಾರೆ:

ನಾನು 48 ಗಂಟೆಗಳ ಕಾಲ ಗೌಹಾಟಿಯಲ್ಲಿದ್ದೆ. ಹೊಸ ಅಧಿವೇಶನದಂದು ವಿಧಾನಸಭೆಯನ್ನು ಉದ್ದೇಶಿಸಿ ರಾಜ್ಯಪಾಲರು ಮಾತನಾಡಿದ ಮಾರ್ಚಿ 19ರ ಮಧ್ಯಾಹ್ನವೂ ಅಲ್ಲೇ ಇದ್ದೆ.

ಶ್ರೀಮತಿ ತೈಮೂರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನ ಪ್ರತಿಭಟನಾ ಬಂದ್‌ಗೆ ಚಳುವಳಿಕಾರರು ಕರೆಕೊಟ್ಟಿದ್ದರು. ಆದರೆ ಈಗ ಕೊಡಲು ಸಾಧ್ಯವಾಗಲಿಲ್ಲ. ಚಳುವಳಿಕಾರರು ತಮ್ಮ ಮೊದಲಿನ ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದಾರೆಂಬುದನ್ನು ಇದು ತೋರಿಸುತ್ತದೆ.

ಆದರೆ ಅಲ್ಪಸಂಖ್ಯಾತರು ಮತ್ತು ಪ್ರಜಾಪ್ರಭುತ್ವವಾದಿ ಅಂಶಗಳ ಮೇಲೆ ದೌರ್ಜನ್ಯ ನಡೆಸುವುದನ್ನು ಅವರು ನಿಲ್ಲಿಸಿಲ್ಲ. ಗೌಹಾಟಿಯಲ್ಲಿ ನಾನಿದ್ದ 48 ಗಂಟೆಗಳಲ್ಲಿ ವಿಧಾನ ಸಭಾ ಸದಸ್ಯರ ಹಾಸ್ಟೆಲ್‌ನಲ್ಲಿ ಎರಡು ಬಾಂಬ್ ಸ್ಫೋಟನೆಗಳಾದವು. ಬ್ರಹ್ಮಪುತ್ರ ಸೇತುವೆಯ ಬಳಿಯೂ ಒಂದು ಬಾಂಬ್ ಪತ್ತೆಯಾಯಿತು. ಜನರ ಬೆಂಬಲ ಕಳೆದುಕೊಂಡ ಮೇಲೆ ಚಳುವಳಿಕಾರರು ತಮ್ಮ ವಿರೋಧಿಗಳಿಗೆ ಭೀಕರ ಬೆದರಿಕೆ ಒಡ್ಡುತ್ತಿದ್ದಾರೆ.

ವಿದ್ಯಾರ್ಥಿ ಸಮುದಾಯದಲ್ಲಿರುವ ಪ್ರಜಾಪ್ರಭುತ್ವವಾದಿ ಅಂಶಗಳ ಬಗ್ಗೆ ಎ.ಎ.ಎಸ್.ಯು. ತಳೆದಿರುವ ನಿಲುವಿನಿಂದ ಇದು ಇನ್ನೂ ಸ್ಪಷ್ಟವಾಗುತ್ತದೆ. ಎಸ್.ಎಫ್.ಐ. ಹುಡುಗರು ಹಾಸ್ಟೆಲ್ ಪ್ರವೇಶಿಸುವುದನ್ನು ಮಾರ್ಚಿ 25ರಿಂದ ಆರಂಭವಾಗಲಿರುವ ಪರೀಕ್ಷೆಗೆ ಹಾಜರಾಗುವುದನ್ನು ಎ.ಎ.ಎಸ್.ಯು.ನವರು ತಡೆಯುತ್ತಿದ್ದಾರೆ. ಇದರ ಬಗ್ಗೆ ಎಸ್. ಎಫ್. ಐ.ನವರು ಅಹವಾಲು ಸಲ್ಲಿಸಿದಾಗ, ಅದು ಕಾನೂನು ಮತ್ತು ಶಿಸ್ತಿನ ಪ್ರಶ್ನೆ ಎಂದು ವಿಶ್ವವಿದ್ಯಾಲಯದವರು ಉತ್ತರಿಸಿದರಂತೆ. ಸರ್ಕಾರ ಇದು ವಿಶ್ವವಿದ್ಯಾಲಯದ ಸ್ವಾಯತ್ತೆಗೆ ಸಂಬಂಧಿಸಿದುದು ಎಂದು ಅಸಹಾಯಕತೆ ವ್ಯಕ್ತಪಡಿಸಿದರಂತೆ.

ರಾಜ್ಯಪಾಲಮತ್ತು ಮುಖ್ಯಮಂತ್ರಿಗಳ ನೇರ ಕೈಕೆಳಗೇ ಇಂಥದೆಲ್ಲ ನಡೆಯುವಾಗ ಇನ್ನು ಒಳಾಡಳಿತದಲ್ಲಿ ಇನ್ನೆಷ್ಟು ನಡೆಯಬಹುದೆಂದು ಊಹಿಸಬಹುದು. ಅಸ್ಸಾಂನ ಪರಿಸ್ಥಿತಿಯು ದೇಶದಾದ್ಯಂತ ಇರುವ ಪ್ರಜಾಪ್ರಭುತ್ವವಾದಿ ಮತ್ತು ಶಾಂತಿಪ್ರಿಯ ಜನರಿಗೆ ಆತಂಕ ಹುಟ್ಟಿಸುವಂತಿದೆ.

ಅಸ್ಸಾಂನಲ್ಲಿರುವ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ವಿಚಾರಗಳ ಬಗ್ಗೆ ಯೋಚಿಸುತ್ತಿದ್ದಾರೆ. ತೈಮೂರ್ ಸರ್ಕಾರದ ಬೆಂಬಲಿಗರು ಮತ್ತು ವಿರೋಧಿಗಳ ನಡುವೆ ಭೀಕರ ಕದನಗಳು ನಡೆಯುತ್ತಿವೆ. ಅಲ್ಪಸಂಖ್ಯಾತರ ಭಾವನೆಗಳನ್ನು ಆಳುವ ಗುಂಪು ಉಪಯೋಗಿಸಿಕೊಳ್ಳುತ್ತಿದ್ದರೆ, ಅಸ್ಸಾಮಿ ಭಾಷೆಯನ್ನಾಡುವ ಜನರ ಭಾವನೆಗಳನ್ನು ವಿರೋಧಿಗಳು ಉಪಯೋಗಿಸುತ್ತಿದ್ದಾರೆ.

ಇವರಿಬ್ಬರ ನಡುವೆ ರಾಜ್ಯ ಮತ್ತು ಜನತೆಯ ಹಿತಾಸಕ್ತಿಗಳು ಬಲಿಯಾಗುತ್ತಿವೆ. ಜನತೆಯ ಶಾಂತಿಯುತ ಮತ್ತು ವ್ಯವಸ್ಥಿತ ಜೀವನ, ಬೆಳೆಯುವ ಮಕ್ಕಳ ಶಿಕ್ಷಣ, ಇತರ ರಾಜ್ಯಗಳ ಅಷ್ಟಿಷ್ಟು ಬೆಳವಣಿಗೆ ಇವೆಲ್ಲವೂ ಅಸ್ಸಾಂ ರಾಜ್ಯದ ಜನತೆಗೆ ಈಗ ಸಿಕ್ಕದೆಹೋಗಿದೆ. ಬಾರ್ಬರ, ಹಜಾರಿಕಾ ಸರ್ಕಾರಗಳು, ಅಧ್ಯಕ್ಷರ ಆಳ್ವಿಕೆ ಈಗ ತೈಮೂರ್ ಸರ್ಕಾರ ಎಲ್ಲವೂ ರಾಜ್ಯದ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಹೇಗೆ ವಿಫಲರಾಗಿದ್ದಾರೆಂಬುದನ್ನು ಅಸ್ಸಾಮಿನ ಜನತೆ ಕಂಡಿದ್ದಾರೆ. ಆ ಸರ್ಕಾರಗಳೆಲ್ಲ ಮಾಡಿದ್ದೆಂದರೆ ಅಸ್ಸಾಂ ಜನತೆಯ ಭಾವನೆಗಳನ್ನು ಉದ್ರೇಕಿಸಿ ಅವರು ತಮ್ಮಲ್ಲೇ ಬಡಿದಾಡುವಂತೆ ಮಾಡಿದ್ದು. ಈಗಿನ ಸರ್ಕಾರವು ಮುಂದುವರೆಯಬೇಕೇ ಅಥವಾ ಉರುಳಬೇಕೆ ಎಂಬುದು ಈಗ ಜನರ ಮುಂದೆ ಒಂದು ದೊಡ್ಡ ರಾಜಕೀಯ ಪ್ರಶ್ನೆಯಾಗಿದೆ.

ಈ ದುರಾದೃಷ್ಟಕರ ರಾಜ್ಯದ ರಾಜಕೀಯಕ್ಕೆ ಒಂದು ಸ್ವರೂಪವನ್ನು ಕೊಡಲು ಒಗ್ಗಟ್ಟಾಗಿ ಶ್ರಮಿಸುತ್ತಿರುವ ಏಳು ರಾಜಕೀಯ ಪಕ್ಷಗಳಲ್ಲಿ ಎರಡು-ಕಾಂಗ್ರೆಸ್ (ಯು) ಮತ್ತು ಲೋಕದಳಗಳು ಜನತಾದ ಜೊತೆ ಸೇರಿ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸುತ್ತಿವೆ. ಆರ್.ಸಿ.ಪಿ.ಐ. ಮತ್ತು ಎಸ್.ಯು.ಸಿ.ಗಳು ಜನತಾದ ಜೊತೆ ಸೇರಿ ರಾಜ್ಯಪಾಲರ ಭಾಷಣದ ಸಮಯದಲ್ಲಿ ಸಭಾತ್ಯಾಗ ಮಾಡಿದರು. ಮಿಕ್ಕ ಎರಡು ಪಕ್ಷಗಳಲ್ಲಿ ಸಿ.ಪಿ.ಐ. ವಿಧಾನ ಮಂಡಲದಲ್ಲಿ ಉಳಿ

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ಬೀದರ್ :

ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯಸಮಿತಿಯ ಕರೆಯ ಮೇರೆಗೆ ಬೀದರ ಘಟಕದವರು ದಿನಾಂಕ 28-3-81ರಂದು 'ನಿರುದ್ಯೋಗ ವಿರೋಧಿ' ದಿನಾಚರಣೆಯನ್ನು ಆಚರಿಸಿದರು.

ಸ್ಥಳೀಯ ಅಂಬೇಡ್ಕರ ಚೌಕದಿಂದ ನಿರುದ್ಯೋಗಿ ಯುವಕರು ಮೆರವಣಿಗೆ ಹೊರಟು ತಮ್ಮ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದರು. ಮೆರವಣಿಗೆಯ ನೇತೃತ್ವವನ್ನು ಕಾಂ. ನರಸಿಂಗ್ ಬಿರಾದಾರಾ, ಪುಂಡಲೀಕ ಮೆಳಕುಂದೆ, ಸಂಗಶೆಟ್ಟಿ ಪಾಟೀಲ, ದತ್ತುಹೊನ್ನಾ ಮೊದಲಾದವರು ವಹಿಸಿದ್ದರು.

ಉಡುಪಿ :

29-3-81ರಂದು ಉಡುಪಿಯ ರೋಟರಿ ಸಭಾಭವನದಲ್ಲಿ ನಗರದ ನಾಗರಿಕ ಪ್ರಮುಖರು ಶ್ರೀ ಕೆ.ವಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಏಪ್ರಿಲ್ 2ರಿಂದ ಪ್ರಾರಂಭವಾಗಲಿದ್ದ ಎಲ್ಲೈಸಿ ಕಾರ್ಮಿಕರಿಗೆ ಬೆಂಬಲವಾಗಿ ನಾಗರಿಕ ಸಮಿತಿಯನ್ನು ರಚಿಸಲಾಗಿದೆ. 49 ಮಂದಿ ಸದಸ್ಯರಿರುವ ಈ ಸಮಿತಿಗೆ ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಯ ಸರ್ಜರಿ ವಿಭಾಗದ ಮುಖ್ಯಸ್ಥ ಡಾ. ಪಿ.ಕೆ.ಆರ್. ವಾರಿಯರ್ ಅವರನ್ನು ಚುನಾಯಿಸಲಾಗಿದೆ. ಸಭೆಯನ್ನುದ್ದೇಶಿಸಿ ಅನೇಕರು ಮಾತನಾಡಿ ಎಲ್ಲೈಸಿ ಕಾರ್ಮಿಕರ ಹೋರಾಟ ಬೆಂಬಲಿಸಿದರು.

2-4-81ರಂದು ಉಡುಪಿಯ ವಿಭಾಗೀಯ ಕಚೇರಿಯ ಮುಂದೆ ಘೋಷಣೆಗಳನ್ನು ಕೂಗುತ್ತಾ ಎಲ್ಲೈಸಿ ನೌಕರರು ಮುಷ್ಕರ ಪ್ರಾರಂಭಿಸಿದರು. ನಾಗರಿಕ ಸಮಿತಿಯ ಸದಸ್ಯರಾದ ಶ್ರೀಮತಿ ಶಾಂತಿ ಡಿ. ಶೆಣೈ ಮತ್ತು ಶ್ರೀ ಬಿ. ರಾಮಚಂದ್ರಭಟ್ಟರು ಮೊದಲಾದವರು ನೌಕರರನ್ನುದ್ದೇಶಿಸಿ ಮಾತನಾಡಿದರು.

ಅದೇ ದಿನ ಸಾಯಂಕಾಲ ಬೃಹತ್ ಬಹಿರಂಗ ಸಭೆ ಜರುಗಿತು.

ಶಿವಮೊಗ್ಗ :

3-4-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿವಮೊಗ್ಗ ಜಿಲ್ಲೆಯ ಆರ್ಗನೈಜಿಂಗ್ ಕಮಿಟಿ ಸಭೆಸೇರಿತ್ತು. ಪಕ್ಷದ ಕರ್ನಾಟಕ ರಾಜ್ಯ ಶಾಖೆಯ ಕಾರ್ಯದರ್ಶಿಯಾದ ಕಾಂ. ಎಂ. ಕೆ. ಭಟ್‌ರು ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಕಾಂ. ಚಂದೂಕುಟ್ಟಿಯವರು ವರದಿಯನ್ನೊಪ್ಪಿಸಿದರು.

ಕಾಂ. ಎಂ. ಕೆ. ಭಟ್‌ರು ಮಾತನಾಡುತ್ತಾ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. ಮೈಸೂರಿನಲ್ಲಿ ಕಳೆದ ಡಿಸೆಂಬರ್‌ನಲ್ಲಿ ಜರುಗಿದ ಪಾರ್ಟಿ ಪ್ಲೀನಮ್ ತೀರ್ಮಾನಕ್ಕೆ ಅನುಗುಣವಾಗಿ ಪಕ್ಷವನ್ನು ಬಲಪಡಿಸುವಂತೆ ಕರೆಕೊಟ್ಟರು.

ಅದೇ ದಿನ ಸಾಯಂಕಾಲ ಪಕ್ಷದ ಸದಸ್ಯರು ಮತ್ತು ಹಿತೈಷಿಗಳು ಸೇರಿದ ಸಂಯುಕ್ತ ಸಭೆಯನ್ನೂ ಉದ್ದೇಶಿಸಿ ಕಾಂ. ಎಂ. ಕೆ. ಮಾತನಾಡಿದರು.

ವಿಜಾಪುರ :

5-4-81ರಂದು ವಿಜಾಪುರದ ನಗರಸಭಾಭವನದಲ್ಲಿ ಸಮಾಜ ವಿಜ್ಞಾನ ವೇದಿಕೆಯ ಆಶ್ರಯದಲ್ಲಿ, ಗುಜರಾತ ಹಾಗೂ ಇನ್ನಿತರ ರಾಜ್ಯಗಳಲ್ಲಿ ನಡೆಯುತ್ತಿರುವ ಮೀಸಲಾತಿ ಧೋರಣೆಯ ವಿರುದ್ಧ ನಡೆಯುತ್ತಿರುವ ಚಳುವಳಿ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು.

ಪ್ರೊ. ಎ. ಎಸ್. ಹಿಪ್ಪರಗಿಯವರು ಚಳುವಳಿ ಕುರಿತು ಪ್ರಸ್ತಾಪಿಸುತ್ತಾ, ಸಮಾಜದ ಒಟ್ಟು ಆರ್ಥಿಕ ಉತ್ಪನ್ನದ ಮತ್ತು ಉತ್ಪಾದನಾ ಸಾಧನಗಳ ವಿತರಣೆ ಸಮಾನತೆಯಿಂದ ಹಂಚುವುದಕ್ಕೆ ಪ್ರೋತ್ಸಾಹಿಸದ ಮೀಸಲಾತಿ ವಿರೋಧಿ ಚಳುವಳಿಗಾರರನ್ನು ಜಾತ್ಯಾತೀತ ಪ್ರಜಾಪ್ರಭುತ್ವ ಧೋರಣೆಯುಳ್ಳ ಪ್ರತಿಯೊಬ್ಬರೂ ವಿರೋಧಿಸಬೇಕಾದ ಅಗತ್ಯವನ್ನು ಒತ್ತಿಹೇಳಿದರು.

ಇದು 'ಸಮಾಜ ವಿಜ್ಞಾನ ವೇದಿಕೆ'ಯ 2ನೇ ವಿಚಾರ ಸಂಕಿರಣವಾಗಿದ್ದು ದಿನಾಂಕ 19-4-81ರಂದು ಪ್ರೊ. ವಿ. ಎಸ್. ಕಲ್ಪನಾ ಅವರು 'ಮಾನವತಾವಾದ' ಕುರಿತು ಮಾತನಾಡಲಿರುವರು.

ಅಮ್ಮಾಡಿ :

ದ. ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಅಮ್ಮಾಡಿ ಗ್ರಾಮದಲ್ಲಿ ಬೀಡಿಮಜೂರರ ಸಭೆ 5-4-81 ರಂದು ಶ್ರೀ ಶ್ಯಾಮಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರಂಭದಲ್ಲಿ ಕಾಂ. ಓಬಯ್ಯ ಬಂಗೇರ ಸ್ವಾಗತಿಸಿದರು.

ಬೀಡಿಕೆಲಸಗಾರರ ಸಂಘದ ಅಧ್ಯಕ್ಷ ಕಾಂ. ಬಿ.ಎಚ್. ಬಂಗೇರ, ಕಾರ್ಯದರ್ಶಿ ಕಾಂ. ಬಿ. ಸಂಜೀವ ಬಂಗೇರ, ರೈತಸಂಘದ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ವಿ. ನಾರಾಯಣ ಮತ್ತು ಸಿ.ಪಿ.ಐ.(ಎಂ) ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ಬಿ. ವಾಸುಗಟ್ಟಿ ಮೊದಲಾದವರು ಮಾತನಾಡಿದರು. ಬೀಡಿಕೆಲಸಗಾರರ ಕೇಳಿಕೆಗಳನ್ನು ಒತ್ತಾಯಿಸಿ ದೀರ್ಘ ಸಮಯದ ಹೋರಾಟಕ್ಕೆ ಸಿದ್ಧರಾಗಬೇಕೆಂದು ರಾಜ್ಯಸಮಿತಿ ನೀಡಿದ ಕರೆಯನ್ನು ಸಭೆ ಸ್ವಾಗತಿಸಿತು. ನಂತರ ಎರಡು ಪ್ರಾದೇಶಿಕ ಸಮಿತಿಗಳನ್ನು ರಚಿಸಲಾಯಿತು. ಮಾನಮಜಲು ಪ್ರದೇಶ ಸಮಿತಿಗೆ ಕಾಂ. ಸುಂದರ ಪೂಜಾರಿ ಕಾರ್ಯದರ್ಶಿಯಾಗಿ, ಪುರುಷೋತ್ತಮರನ್ನು ಅಧ್ಯಕ್ಷರನ್ನಾಗಿ, ಕೆಂಪುಗುಡ್ಡೆ ಸಮಿತಿಗೆ ಕಾಂ. ಓಬಯ್ಯ ಬಂಗೇರ ಇವರನ್ನು ಅಧ್ಯಕ್ಷರನ್ನಾಗಿ, ಕಾಂ. ಲಕ್ಷ್ಮಣ ಪೂಜಾರಿಯವರನ್ನು ಕಾರ್ಯದರ್ಶಿಯಾಗಿ ಆರಿಸಲಾಯಿತು.

●

ಖಾಸಗಿ ಮಾಧ್ಯಮಿಕ ಶಾಲಾ ನೌಕರರ ಹೋರಾಟ

ಅನೇಕ ವರ್ಷಗಳಿಂದ ಖಾಸಗಿ ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿ ಸಿಕ್ಕು ವಿಲವಿಲ ಒದ್ದಾಡುತ್ತಿರುವ ಮತ್ತು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿರುವ ಖಾಸಗಿ ಶಾಲಾ ನೌಕರರು ಇತ್ತೀಚೆಗೆ ಅತೀ ದೊಡ್ಡ ಪ್ರಮಾಣದಲ್ಲಿ ಹೋರಾಟಕ್ಕಿಳಿದರು. ಕಾಂ. ಕೆ. ವಿ. ರಾಯಚೂರ, ಕಾಂ. ವಿಲ್ಸನ್ ಗಡ್ಡಿ, ಕಾಂ. ಬಿ. ಎಸ್. ಸೊಪ್ಪಿನ್ ಮತ್ತು ಕಾಬಾಲಿರೆಡ್ಡಿ ಮುಂತಾದವರ ಸಮರ್ಥ ನೇತೃತ್ವದಲ್ಲಿ ಖಾಸಗಿ ಶಾಲಾ ನೌಕರರ ಹೋರಾಟ ಸಂಘಟನೆ ಬಲಿಷ್ಠ - ವಿಸ್ತೃತ - ತೀವ್ರಗೊಂಡಿದೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ (ರಿ) ದಡಿಯಲ್ಲಿ ಈಗ ಹನ್ನೊಂದು-ಹನ್ನೆರಡು ಜಿಲ್ಲೆಗಳಲ್ಲಿ ಸಂಘಟನೆ ವ್ಯಾಪಕಗೊಂಡು ಇತ್ತೀಚೆಗೆ ಶಿಕ್ಷಕರ ಪ್ರತಿನಿಧಿ ಚುನಾವಣೆಯಲ್ಲಿ ಕಾಂಗ್ರೆಸ್ (ಐ), ಜನತಾ, ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸಿ ಸಂಘದ ವತಿಯಿಂದ ಶ್ರೀ ಬಸವರಾಜ ಹೊರಟ್ಟಿ ಮತ್ತು ಎಸ್. ಎಸ್. ಪೂಜಾರ ಇವರಿಬ್ಬರು ಎಂ. ಎಲ್. ಸಿ. ಸ್ಥಾನಗಳಿಗೆ ಆಯ್ಕೆಗೊಂಡಿದ್ದಾರೆ.

ಹೋರಾಟದ ತಯಾರಿ

ಸಂಯುಕ್ತ-ವಿಸ್ತೃತ ಹೋರಾಟದ ಮೊದಲ ಹಂತವಾಗಿ "ಸರಕಾರಿ ಶಾಲಾ ನೌಕರರು ಹೊಂದಿರುವ ಸೇವಾ ಸೌಲಭ್ಯಗಳು ತಮಗೂ ಬೇಕೆನ್ನುವುದು ಖಾಸಗಿ ಶಾಲಾ ನೌಕರರ ಕೇಳಿಕೆ" ಇದನ್ನಾಧರಿಸಿ ಅನೇಕ ಬೇಡಿಕೆಗಳನ್ನು ಒತ್ತಾಯಿಸಿ ಹೋರಾಡಲು ಎಲ್ಲ ಖಾಸಗಿ ಶಿಕ್ಷಕ-ಶಿಕ್ಷಕರೇತರ ನೌಕರರು ಒಂದಾಗಿರುವಲ್ಲದೆ ಶಾಲಾ ಮುಖ್ಯೋಪಾಧ್ಯಾಯರು ಸಹ ಭಾಗಿಯಾದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ (ರಿ) ಮತ್ತು ಬೋರ್ಡ್ ಆಫ್ ಹೆಡ್ ಮಾಸ್ಟರ್ಸ್ ಸೇರಿ "ಖಾಸಗಿ ಶಾಲಾ ನೌಕರರ ಹೋರಾಟ ಸಮನ್ವಯ ಸಮಿತಿ"ಯನ್ನು ಶ್ರೀಕಲಯ್ಯನ ಮಠ ಇವರ ಅಧ್ಯಕ್ಷತೆಯಲ್ಲಿ ರಚಿಸಿಕೊಂಡು ಹೋರಾಟ ಪ್ರಾರಂಭಗೊಂಡಿತು. ಖಾಸಗಿ ಮಾಧ್ಯಮಿಕ ಶಾಲೆಗಳ ಇಡೀ ಸಿಬ್ಬಂದಿ-ಜವಾನನಿಂದ ಹಿಡಿದು ಮುಖ್ಯೋಪಾಧ್ಯಾಯರನ್ನೊಳಗೊಂಡಂದಿತ್ತೆಂದು ಎದ್ದುನಿಂತು ಒಗ್ಗಟ್ಟಾಗಿ ಸರಕಾರವನ್ನು ಒತ್ತಾಯಿಸಲು ಹೋರಾಟಕ್ಕಿಳಿಯಲಾಯಿತು. ಸೆಕೆಂಡರಿ ಶಿಕ್ಷಕ-ಶಿಕ್ಷಕರೇತರ ನೌಕರರ ಒಟ್ಟು ಹೋರಾಟದ ಪ್ರಾರಂಭದಲ್ಲಿ ಇದೊಂದು ಅತ್ಯಂತ ಮಹತ್ವದ ಮತ್ತು ಉತ್ತಮ ಹೆಜ್ಜೆಯಾಗಿದೆ.

ವಿಸ್ತೃತ-ತೀವ್ರ ಹೋರಾಟ

ಮನವಿ ಕೊಟ್ಟು ಅನೇಕ ದಿವಸಗಳಾಗಿತ್ತು. ಶಿಕ್ಷಣ ಮಂತ್ರಿಗಳು ಮಾತುಕತೆಗೆ ಕರೆಯಿಸಿ ಬೇಡಿಕೆಗಳನ್ನು ಬಗೆಹರಿಸುತ್ತಾರೆಂಬ ಆಸೆಹೊಂದಿ ಕಾಯ್ದು ಕಾಯ್ದು ಬೆಸತ್ತು ಜನವರಿ 6 ರಂದು ಒಂದು ದಿನದ ಸಾಂಕೇತಿಕ ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಡಲಾಗಿತ್ತು. ಇದು testing dose ಆಗಿತ್ತು ಸಂಪೂರ್ಣ ಯಶಸ್ವಿಯಾಯಿತು. ಆತ್ಮ ವಿಶ್ವಾಸ ಮೂಡಿತು.

ಪರೀಕ್ಷೆಗಳು ಸಮೀಪಿಸುತ್ತಿವೆ. ನೆನೆಗುದಿಗೆ ಬಿದ್ದ ಬೇಡಿಕೆಗಳನ್ನು ಒತ್ತಾಯಿಸಿ ಹೋರಾಡುವುದು ಅನಿವಾರ್ಯವಾಗಿದೆ. ಅನೇಕ ವರ್ಷಗಳವರೆಗೆ ಕಷ್ಟ ಸೋಸಿ ಜೀವ ಬೇಸತ್ತಿದೆ. ಹೀಗಾಗಿ ಅಂತಿಮವಾಗಿ ಹೋರಾಟವನ್ನು ಇನ್ನೊಂದು ಹೆಜ್ಜೆ, ಮುಂದೆ ಹೋಗಿ ತೀವ್ರಗೊಳಿಸಬೇಕೆನ್ನುವ ಉದ್ದೇಶಹೊಂದಿ ಮಾರ್ಚ್ 12ರಿಂದ "ಒಳಗಿದ್ದೇ ಕೆಲಸಕ್ಕೆ ಬಹಿಷ್ಕಾರ" ಹೋರಾಟಕ್ಕೆ ದುಮುಕಲಾಯ್ತು. ವಾಸ್ತವಿಕವಾಗಿ ಖಾಸಗಿ ಮಾಧ್ಯಮಿಕ ಶಾಲಾ ನೌಕರರ ಈ ಹೆಜ್ಜೆ ಹೈಸ್ಕೂಲ ವಾರ್ಷಿಕ ಪರೀಕ್ಷೆಗಳನ್ನೇ ಸ್ಥಗಿತಗೊಳಿಸುವಂತೆ ಮಾಡುವದಾಗಿತ್ತು.

ನೌಕರರ ಯಶಸ್ವಿ ಹೋರಾಟ

"ಒಳಗಿದ್ದೇ ಕೆಲಸಕ್ಕೆ ಬಹಿಷ್ಕಾರ" ಹೋರಾಟ ಐದು ದಿವಸಗಳ ಕಾಲ ನಡೆಯಿತು. ಹನ್ನೆರಡು ಜಿಲ್ಲೆಗಳಲ್ಲಿ 25 ಸಾವಿರ ಶಿಕ್ಷಕ-ಶಿಕ್ಷಕರೇತರ ನೌಕರರನ್ನೊಳಗೊಂಡ ಖಾಸಗಿ ಮಾಧ್ಯಮಿಕ ಶಾಲಾ ನೌಕರರ ಹೋರಾಟ ಅತೀ ಯಶಸ್ವಿ ರೀತಿಯಲ್ಲಿ ತುರ್ತಾಗಿ ನಡೆಯಿತು. ವಿವಿಧ ಪ್ರದೇಶಗಳಲ್ಲಿ ವಿವಿಧ ಶಿಕ್ಷಣ ವಿಭಾಗಾಧಿಕಾರಿಗಳು ಶಿಕ್ಷಕರನ್ನು ಹೆದರಿಸಿ-ಬೆದರಿಸಿ ಹೋರಾಟವನ್ನು ಮುರಿಯಲು ಪ್ರಯತ್ನಿಸಿದರು. ಏನೇ ಆದರೂ ಶಿಕ್ಷಕರು ಜಗ್ಗಲಿಲ್ಲ; ಬಗ್ಗಲಿಲ್ಲ. ಯಶಸ್ವೀ ರೀತಿಯಲ್ಲಿ ಹೋರಾಟ ಮುಂದುವರೆಯಿತು. ಸರಕಾರ ಮುಂದೆ ಆಗಬಹುದಾದ ಅನಾಹುತವನ್ನು ಊಹಿಸಿಕೊಂಡು ಕೊನೆಗೂ ಖಾಸಗಿ ಶಾಲಾ ನೌಕರರ ಪ್ರತಿನಿಧಿಗಳನ್ನು ಮಾತುಕತೆಗೆ ದಿ. 16-3-1981ರಂದು ಕರೆದು ಕೆಲವು ಮುಖ್ಯ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿತು.

ಹೋರಾಟದಿಂದ ಸಾಧಿಸಿದ್ದು ದು-ಸಾಧಿಸಬೇಕಾದುದು

ಸರಕಾರ ಗ್ರಾಚ್ಯುಟಿಕೊಡಲು ಒಪ್ಪಿದೆ. Comprehensive Secondary School's Bill ಬರುವವರೆಗೂ ಶಿಕ್ಷಕರನ್ನು ವಜಾಗೊಳಿಸುವುದಕ್ಕೆ ತಡೆಯಾಜ್ಞೆ ನೀಡಿ ಶಿಕ್ಷಕರಿಗೆ ನೌಕರಿ ಸುರಕ್ಷತೆಯನ್ನು ಒದಗಿಸಿಕೊಡಲು ಒಪ್ಪಿಕೊಂಡಿದೆ. ಕುಟುಂಬ ಕಲ್ಯಾಣ ನಿಧಿ ಯೋಜನೆಯನ್ನು ಜಾರಿಗೊಳಿಸುವುದಾಗಿ ಹೇಳಿದೆ. ಹೀಗೆ ಕೆಲವು ಮುಖ್ಯ ಬೇಡಿಕೆಗಳನ್ನು ಬಗೆಹರಿಸಿದ್ದರಿಂದ ಈಗ ಖಾಸಗಿ ಮಾಧ್ಯಮಿಕ ಶಾಲಾ ನೌಕರರ ಹೋರಾಟ ಯಶಸ್ವಿ ರೀತಿಯಲ್ಲಿ ಕೊನೆಗೊಂಡಿದೆ. ಹೋರಾಟ ಸಂಘಟನೆಯಿಂದ ಅಸಾಧ್ಯ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾದುದರ ಬಗ್ಗೆ ಶಿಕ್ಷಕರಲ್ಲಿ ತಮ್ಮಲ್ಲಿಯೇ ಅಪಾರ ವಿಶ್ವಾಸ ಮೂಡಿದೆ. ಇದು ಖಾಸಗಿ ಮಾಧ್ಯಮಿಕ ಶಾಲಾ ನೌಕರರ ಹೋರಾಟದ ಪ್ರಾರಂಭ ಮಾತ್ರ. "ಖಾಸಗಿ ಶಾಲೆಗಳನ್ನು ರಾಷ್ಟ್ರೀಕರಣಗೊಳಿಸುವವರೆಗೂ ಹೋರಾಟ ಮುಂದುವರೆಯಬೇಕು".

ಧಾರವಾಡ

ಎಸ್.ಎಫ್.ಐ. ಪಾತ್ರ

ರಾಜ್ಯದಾದ್ಯಂತ ಖಾಸಗಿ ಶಾಲಾ ನೌಕರರು ಇಂಥ ಮಹತ್ವದ ಹೋರಾಟ ನಡೆಸುತ್ತಿರುವಾಗ ಧಾರವಾಡದ ಒಂದೆರಡು ಸಂಸ್ಥೆಗಳಿಗೆ ಸೇರಿದ ನಾಲ್ಕೈದು ಹೈಸ್ಕೂಲುಗಳು ಈ ಹೋರಾಟದಲ್ಲಿ ಭಾಗಿಯಾಗಲು ಇಚ್ಛೆಪಡಲಿಲ್ಲ. ಬದಲು ಶಾಲೆಗಳನ್ನು ನಡೆಸುವುದಾಗಿ ತೀರ್ಮಾನಿಸಿದವು. ಆರ್.ಎಸ್.ಎಸ್. ಮುಂತಾದ ಮಂತೀಯ ಹಿತಾಸಕ್ತಿಗಳು ಈ ಪ್ರಗತಿಪರ-ಪ್ರಜಾಸತ್ತಾತ್ಮಕ ಹೋರಾಟ

(ಕಡೇ ಪುಟ ನೋಡಿ)

ಹುಟ್ಟಿನಿಂದಲೇ ನೋವುಣ್ಣುವ ಜನಾಂಗದ ನಾಯಕ

—ಯಡೂರ ಮಹಾಬಲ

(ಏಪ್ರಿಲ್ 14, ಡಾ. ಅಂಬೇಡ್ಕರರ ಜನ್ಮದಿನ. ಈ ನಿಮಿತ್ತ ವಿಶೇಷ ಲೇಖನ)

"ಭಾರತದಲ್ಲಿ ಮಹಾತ್ಮರುಗಳಿಗೇನೂ ಕೊರತೆಯಿಲ್ಲ. ಮಹಾತ್ಮರು ಬಂದರು, ಮಹಾತ್ಮರು ಹೋದರು. ಆದರೆ ಅಸ್ಪೃಶ್ಯರು ಇದ್ದ ಸ್ಥಿತಿಯಲ್ಲೇ ಇದ್ದಾರೆ". ಹೀಗೆಂದು ಯಾವ ಮಹಾತ್ಮನಿಗೂ ಕಾಯದೆ, ಯಾರ ಸಹಿಮನಸ್ಸಿನ ಮೇಲೂ ಅವಲಂಬಿಸದೆ ಸ್ವತಃ ಕಣ್ಣು ತೆರೆದು ಬಾಯಿತೆರೆದು ಒಂದಾಗಿ ಏಳಬೇಕೆಂದು ದಲಿತರಲ್ಲಿ ಸ್ವಾಭಿಮಾನವನ್ನು ಚಿಗುರಿಸಿ ಹೋರಾಟದ ಮೊದಲ ಪಾಠವನ್ನು ಕಲಿಸಿದವರು ಡಾ॥ ಬಿ. ಆರ್. ಅಂಬೇಡ್ಕರ್.

ಹುಟ್ಟಿನ ಮೇಲೆ ಹಣೆಯ ಬರಹ ಬರೆಯುವ ಹಿಂದೂ ಧರ್ಮದ ಹೀನ ಕ್ರೌರ್ಯದ ಜೊತೆಗೆ ಯೂರೋಪಿಯನ್ ನಿರಂಕುಶಾಧಿಕಾರ ನೆಟ್ಟಿದ್ದ ಭಾರತದ ಸಮಾಜ ವ್ಯವಸ್ಥೆಯ ಪಾತಾಳದಿಂದ ಶತಮಾನಗಳ ಮೂಕವೇದನೆಯ ಸಿಡಿಲಾಗಿ ಅಂಬೇಡ್ಕರ್ ಈ ಶತಮಾನದ ಇಪ್ಪತ್ತರ ದಶಕದಲ್ಲಿ ಬಂದರು. ಸಿಡಿಲಿಗೆ ಭೂಮಿ ಬಿರುಕು ಬಿಟ್ಟಿತು. ಬಿರುಕುಗಳೊಳಗಿಂದ ಹಸಿರು ಮೊಳಕೆಗಳು ಮೇಲೆದ್ದವು. ಆದರೆ ನೀರೆಲ್ಲಿ? ಸಾರವೆಲ್ಲಿ ಫಲಹೊತ್ತು ನಿಲ್ಲಲು? ಎನ್ನುವುದು ನಮ್ಮ ಸಮಕಾಲೀನ ಜನಾಂಗವನ್ನು ಕಾಡುತ್ತಿದೆ.

ಮುಳ್ಳುಹಾದಿಯ ಮೇಲೆ

ಅಂಬೇಡ್ಕರ್ ಹುಟ್ಟಿದ್ದು 14ನೇ ಏಪ್ರಿಲ್ 1891ರಂದು. ಮಹಾರಾಷ್ಟ್ರದ ರತ್ನಪುರಿ ಜಿಲ್ಲೆಯ ಅಂಬೇವಾಡಿಯಲ್ಲಿ. ಮೈತುಂಬ ಬರೆಬರೆಗಳೊಂದಿಗೇ ಹುಟ್ಟಿದವರಿಗೆ ಮತ್ತೆ ಬಾಸುಂಡೆಯ ಹೊಡೆತಗಳನ್ನು ಅನುಭವಿಸುತ್ತಾ ಮುಳ್ಳು ಹಾದಿಯ ಮೇಲೆ ಸಾಗಬೇಕಾಯಿತು. ಚಿಕ್ಕಂದಿನಿಂದಲೇ ಅಸ್ಪೃಶ್ಯತೆಯ ಕಹಿ ಅನುಭವಗಳು. ಕೆರೆಯ ನೀರು ಕುಡಿದದ್ದಕ್ಕೆ ಸವರ್ಣೀಯರಿಂದ ಸಾಯುವ ಹೊಡೆತಗಳು. ಶಾಲೆಯಲ್ಲಿ ಕಲಿಯಲು ಸವರ್ಣೀಯ ಮಕ್ಕಳಿಂದ ದೂರಕೂರಬೇಕು. ಗಾಡಿ ಏರಿಕುಳಿತರೆ 'ಮಹಾರ'ನೆಂದು ಮಧ್ಯದಾರಿಯಲ್ಲೇ ಇಳಿಸಿದರು. ಕ್ಷೌರಕ್ಕಾಗಿ ಹೋದರೂ ಹೊಲೆಯನೆಂದು ತಿರಸ್ಕಾರ. ಸಂಸ್ಕೃತ ಕಲಿಸಿರಿ ಎಂದರೆ ಹೀನಾಯ ಬೈಗುಳಗಳು. ಓದು ಬರಹ ಕಲಿಯುವುದೇ ಸಂಪ್ರದಾಯ ಶಕ್ತಿಗಳಿಗೆ ಕಿಚ್ಚು. ಈ ಎಲ್ಲಾ ಕಷ್ಟಕೂಪದಿಂದಲೂ ಮೆಟ್ರಿಕ್, ಬಿ. ಎ. ಪದವಿ ಪಾಸು ಮಾಡಿದರು. ನಂತರ ನ್ಯೂಯಾರ್ಕ್ ನಗರದಲ್ಲಿ ವ್ಯಾಸಂಗ. ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಎಂ. ಎ. ಮತ್ತು ಪಿ. ಹೆಚ್. ಡಿ. ಪದವಿಗಳನ್ನು, ಇಂಗ್ಲೆಂಡಿನಿಂದ ಡಿ. ಎಸ್. ಸಿ. ಮತ್ತು ಬಾರ್ ಅಟ್ ಲಾ ಪದವಿಗಳನ್ನು ಪಡೆದರು. ಸ್ವತಂತ್ರ ಭಾರತದಲ್ಲೇ ಸವರ್ಣೀಯ ಮಕ್ಕಳಿಗೂ ಕನಿಷ್ಠವಿದ್ಯೆ ಸಿಗುವುದು ಕಷ್ಟವಾಗಿರುವಾಗ ಆ ಕತ್ತಲು ಯುಗದಲ್ಲಿ ಬಡ ಅಸ್ಪೃಶ್ಯನೊಬ್ಬ ಈ ಉನ್ನತ ವ್ಯಾಸಂಗವನ್ನು ಸಾಧಿಸಲು ಪಟ್ಟಿರುವ ಯಾತನೆಗಳನ್ನು ಊಹಿಸುವುದೂ ಕಷ್ಟ.

ಮೂಕ ನಾಯಕ

ವಿದೇಶದಲ್ಲಿ ವಿದ್ಯಾಭ್ಯಾಸ ಮುಗಿಸಿ ಬಂದ ನಂತರ ಅಂಬೇಡ್ಕರ್ ಪ್ರಾರಂಭಿಸಿದ 'ಮೂಕನಾಯಕ' ಪತ್ರಿಕೆ ಮೌನವಾಗಿ ಅನುಭವಿಸಬೇಕಾಗಿದ್ದ ಜನಾಂಗದ ಸಾವಿರ ವರ್ಷಗಳ ಮೊಟ್ಟಮೊದಲ ಮಾತಾಗಿತ್ತು. ಅದು ಈ ಸಮಾಜದಲ್ಲಿರುವ ಅನ್ಯಾಯ ಅಸಮಾನತೆಗಳನ್ನು, ನೀಚ ಆಚಾರಗಳನ್ನು ಬಯಲಿಗೆಳೆಯುವ ಸಾಧನವಾಗಿತ್ತು. ದಲಿತರ ಹಾಗೂ ಎಲ್ಲ ಹಿಂದುಳಿದ ಜನಾಂಗಗಳ ಬೌದ್ಧಿಕ, ಸಾಂಸ್ಕೃತಿಕ ಪ್ರಗತಿಗಾಗಿ ಆಗಬೇಕಾದ ಹೋರಾಟದ ಅವಶ್ಯಕತೆಗಳ ಅರಿವು ಮೂಡಿಸುತ್ತಿತ್ತು. ಅನೇಕ ಕಡೆಗಳಲ್ಲಿ ದಲಿತ ಸಂಘಟನೆ ಮೊಳಕೆಯೊಡೆಯಲು ಸ್ಫೂರ್ತಿಯ ಸಾಧನವಾಗಿತ್ತು. ಆದರೆ ಪತ್ರಿಕೆ ಬಹಳ ದಿನಗಳ ಕಾಲ ನಡೆಯಲಿಲ್ಲ.

ಬಹಿಷ್ಕೃತ ಹಿತಕಾರಿಣಿ ಸಭಾ

ದಲಿತರ ಶೈಕ್ಷಣಿಕ, ಸಾಮಾಜಿಕ ಆರ್ಥಿಕ ಪ್ರಗತಿಗಾಗಿ ಶ್ರಮಿಸಲು 1924ರಲ್ಲಿ 'ಬಹಿಸ್ಕೃತ ಹಿತಕಾರಿಣಿ ಸಭಾ' ಎಂಬ ಸಂಸ್ಥೆಯನ್ನು ಅಂಬೇಡ್ಕರ್ ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ಅನೇಕ ಶಾಲೆ, ಕಾಲೇಜು, ಹಾಸ್ಟೆಲ್‌ಗಳನ್ನು ನಡೆಸಲು ಪ್ರಾರಂಭಿಸಿದರು. ಈ ಸಂಸ್ಥೆಯಿಂದಲೇ ಸ್ಫೂರ್ತಿ, ಪ್ರಚೋದನೆ ಪಡೆದು ಹುಟ್ಟಿಕೊಂಡ ಹಲವಾರು ಸಂಘಸಂಸ್ಥೆಗಳ ಕಾರ್ಯಾಚರಣೆಯಿಂದಾಗಿ ಅನೇಕಾನೇಕ ದಲಿತ ಮಕ್ಕಳು ಶಿಕ್ಷಣ ಪಡೆದು ಮುಂದೆ ಬರಲು ಸಾಧ್ಯವಾಯಿತು. ದಲಿತರ ಸಂಘಟನಾತ್ಮಕ ಬೆಳವಣಿಗೆಗೆ ಇವು ವೇಗವರ್ಧಕ ಶಕ್ತಿಯುಂತಾಗಿದ್ದವು.

ಹಿಂದೂ ಧರ್ಮದ ವಿರುದ್ಧ ರಣಕಹಳೆ

"ಈ ದೇಶದಲ್ಲಿ ದಲಿತರನ್ನು ಮನುಷ್ಯರೆಂದು ಪರಿಗಣಿಸಲ್ಪಡುವಂತೆ ಮಾಡಲಾಗದಿದ್ದಲ್ಲಿ, ಮರ್ಯಾದೆಯುಂತ ಬದುಕಿನ ವಿಕಾಸವಾಗುವಂತೆ ಮಾಡಲಾಗದಿದ್ದಲ್ಲಿ ನಾನು ನನ್ನ ಎದೆಯನ್ನು ತುಪಾಕಿಯಿಂದ ಸೀಳಿಕೊಂಡು ಸಾಯುತ್ತೇನೆ" ಎಂದು ಅಂಬೇಡ್ಕರ್ ಪಣತೊಟ್ಟಿದ್ದರು. ದಲಿತರಿಗೆ ಮರ್ಯಾದೆಯುತವಾದ ಮನುಷ್ಯಜೀವನ ಸಾಧ್ಯವಾಗಿಸುವುದಕ್ಕೆ ಆಗಬೇಕಾದದ್ದು ಅಸ್ಪೃಶ್ಯತೆ ಮತ್ತು ಜಾತಿವ್ಯವಸ್ಥೆಯ ನಾಶ, ಹಳ್ಳಿ ಹಳ್ಳಿಗಳಿಗೆ ಊರೂರಿಗೆ ತಿರುಗಿ ದಲಿತರನ್ನು ಎಚ್ಚರಿಸಿ ಅಸ್ಪೃಶ್ಯತೆಯ ವಿರುದ್ಧ ಸಾಮೂಹಿಕ ಹೋರಾಟವನ್ನು ಪ್ರಾರಂಭಿಸುವುದರ ಮೂಲಕ ಹಿಂದೂ ಧರ್ಮದ ವಿರುದ್ಧ ರಣಕಹಳೆಯನ್ನು ಸಾರಿದರು. 1927 ಮಾರ್ಚ್ ರಂದು ಸಾವಿರ ಸಾವಿರ ಗಟ್ಟಲೆ ದಲಿತರು ಮಹಾಡ್ ನಗರದ ಚೌದಾರ ಕೆರೆಯ ನೀರನ್ನು ಸಾಮೂಹಿಕವಾಗಿ ಕುಡಿಯುವುದರ ಮೂಲಕ ನಾಯಿನರಿಗಳೂ ಸ್ವೇಚ್ಛೆಯಿಂದ ಕುಡಿಯುವ ನೀರನ್ನು ಮನುಷ್ಯರಾದ ದಲಿತರಿಗೆ ಬಹಿಷ್ಕರಿಸಿದ ಹಿಂದೂ ಧರ್ಮದ ಹೀನತೆಯನ್ನು ಸಾರ್ವಜನಿಕವಾಗಿ ಧಿಕ್ಕರಿಸಿದರು. ಆದರೆ ನಂತರದಲ್ಲಿ ಬ್ರಾಹ್ಮಣರು ದನದ ಸಗಣಿ, ಮೂತ್ರಗಳಿಂದ ಕೆರೆಯ ನೀರನ್ನು ಶುದ್ಧಗೊಳಿಸುವ ಶಾಸ್ತ್ರ ಮಾಡಿದರು ಹಾಗೂ ಅದೇ ವೇಳೆಗೆ ಮಹಾಡ್ ನಗರ ಸಭೆಯು 'ಚೌದಾರ ಕೆರೆಯ ನೀರು ಸಾರ್ವಜನಿಕ ಆಸ್ತಿಯಲ್ಲ ಎಂದು ಪ್ರಕಟಪಡಿಸಿ ದಲಿತರ



ಮಹಾರಾಷ್ಟ್ರದ ಮಣ್ಣಿನಲ್ಲಿ
ಮೂಡಿ ಬಂದ ಗುಡುಗು ಸಿಡಿಲೆ
ಮಳೆಯನೇಕೆ ತಾರಲಿಲ್ಲ
ಮಿಂಚು ಮಾಯ ಆಸ್ಯೆಯೆ?

—ಸಿದ್ಧಲಿಂಗಯ್ಯ

ವಿರುದ್ಧ ಸಮರವನ್ನೇ ಸಾರಿತು. ಇದನ್ನು ಉಗ್ರವಾಗಿ ಪ್ರತಿಭಟಿಸಿ 10.000 ಜನ ದಲಿತರು ಸತ್ಯಾಗ್ರಹ ಹೂಡಿದರು. ಅಮಾನವೀಯ ಬೇಧ ಭಾವಗಳನ್ನು ಆಚರಿಸಲು ಬೋಧಿಸುವ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟರು. ಹೀಗೆ ಕೆರೆ ಭಾವಿಗಳನ್ನು ದಲಿತರಿಗೆ ಮುಕ್ತವಾಗಿಸುವ ಚಳುವಳಿ ಎಲ್ಲೆಡೆಗೂ ಹಬ್ಬಿಕೊಂಡಿತು. ಕೆರೆ ಭಾವಿಗಳೊಂದಿಗೆ ಆಕ್ರಮಿಸಿಕೊಂಡಿದ್ದ ದೇವಸ್ಥಾನಗಳ ಮೇಲೆ ಪ್ರತ್ಯಾಕ್ರಮಣ ಶುರುಮಾಡಿದರು. ದಲಿತರಿಗೆ ದೇವಸ್ಥಾನಗಳು ಮುಕ್ತಾದ್ವಾರವಾಗಬೇಕೆಂದು ನಾಸಿಕ್ ದೇವಸ್ಥಾನದ ಎದುರಿಗೆ 15.000 ದಲಿತರು ಸತ್ಯಾಗ್ರಹ ನಡೆಸಿದರು. ಹಿಂದೂಗಳು ಅನೇಕ ದಿನಗಳವರೆಗೆ ದೇವಸ್ಥಾನವನ್ನು ಮುಚ್ಚಿಬಿಟ್ಟರು. ದಲಿತರ ಪ್ರವೇಶಕ್ಕೆ ಒಪ್ಪಲಿಲ್ಲ. "ನಾವು ಹಿಂದೂ ಧರ್ಮಕ್ಕೆ ಸೇರಿದವರೋ ಅಲ್ಲವೋ ಎನ್ನುವುದು ಒಮ್ಮೆಲೇ ನಿರ್ಧಾರವಾಗಿಬಿಡಬೇಕು" ಎಂದು ಅಂಬೇಡ್ಕರ್ ಗರ್ಜಿಸಿದರು. ಅದು ಇಡೀ ಹಿಂದೂ ಸಮಾಜ ವ್ಯವಸ್ಥೆಯ ನೆಲಗಟ್ಟನ್ನೇ ನಡುಗಿಸಿದ ಧ್ವನಿಯಾಗಿತ್ತು.

ಹೋರಾಟ ರಾಜಕೀಯ ರಂಗಕ್ಕೆ

ಧಾರ್ಮಿಕ ಸಾಮಾಜಿಕ ರಂಗಗಳಲ್ಲಷ್ಟೇ ಹೋರಾಡಿದರೆ ಸಾಲದೆಂದೂ, ದಲಿತ ವಿಮೋಚನೆಗೆ ದಲಿತ ಹೋರಾಟವು ರಾಷ್ಟ್ರಮಟ್ಟದಲ್ಲಿ ನೇರ ರಾಜಕೀಯ ಸ್ವರೂಪ ತಾಳುವುದು ಅತ್ಯಾವಶ್ಯಕವೆಂದೂ ಅಂಬೇಡ್ಕರ್ ಮನಗೊಂಡಿದ್ದರು. ಈ ಮೊದಲೇ ಅಂಬೇಡ್ಕರ್‌ರವರನ್ನು ಬೊಂಬಾಯಿ ಶಾಸನ ಮಂಡಳಿಯ ಸದಸ್ಯರಾಗಿ ಆರಿಸಲಾಗಿತ್ತು. ಬೊಂಬಾಯಿ ಪ್ರಾಂತ್ಯದಲ್ಲಿ ದಲಿತ ಪ್ರಾತಿನಿಧ್ಯದ ಪ್ರಶ್ನೆ ಆವಾಗಲೇ ಬಲವಾಗಿ ಮೇಲೆದ್ದಿತ್ತು. ಭಾರತಕ್ಕೆ ಸೈಮನ್ ಕಮೀಷನ್ ಬಂದ ಸಂದರ್ಭವನ್ನು ಅಂಬೇಡ್ಕರ್ ಬಳಸಿಕೊಂಡು ದಲಿತರ ಬೇಡಿಕೆಯ ಮನವಿಯನ್ನು ಸಲ್ಲಿಸಿದರು. ಆದರೆ ಸೈಮನ್ ಕಮೀಷನ್ ಅವರ ಮನವಿಯನ್ನು ತಿರಸ್ಕರಿಸಿತು. ನಂತರದಲ್ಲಿ ನಡೆದ ಲಂಡನ್ ದುಂಡುಮೇಜಿನ ಪರಿಷತ್ತುಗಳನ್ನು ಅಂಬೇಡ್ಕರ್ ಸಮರ್ಥವಾಗಿ ಉಪಯೋಗಿಸಿಕೊಂಡು ಅಸ್ಪೃಶ್ಯತೆಯನ್ನು ಕಾನೂನುಬಾಹಿರವಾಗಿ ಪರಿಗಣಿಸಿ, ದಲಿತರಿಗೆ ಸಮಾನ ಪೌರತ್ವ, ಸಮಾನ ಹಕ್ಕುಗಳು ಹಾಗೂ ಯಾವುದೇ ಭೇದಭಾವಗಳ ಆಚರಿಸದಂತೆ ಕಾನೂನು ರಕ್ಷಣೆಯನ್ನೂ, ಶಾಸಕಾಂಗ ಆಡಳಿತ ರಂಗಗಳಲ್ಲಿ ವಿಶೇಷ ಮೀಸಲಾತಿ ಸೌಲಭ್ಯಗಳನ್ನೂ, ದಲಿತರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳನ್ನೂ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಇದನ್ನು ಸಾಧಿಸಬೇಕಾದರೆ ಬ್ರಿಟೀಷರ ನಿರಾಸಕ್ತಿಯನ್ನೂ ಹಿಂದೂಗಳ ವಿರೋಧವನ್ನೂ, ಇತರರ ಅಸಹಕಾರವನ್ನೂ ಎದುರಿಸಬೇಕಾಯಿತು.

ಸಾಧಿಸಿದ ಇವೆಲ್ಲವೂ ಸಹ ಸ್ವಾತಂತ್ರ್ಯಬರುವ ಸಮಯದಲ್ಲಿ ಹಿಂದೂ ಬಹುಸಂಖ್ಯಾತರ ಪ್ರಾಬಲ್ಯದಿಂದ ನಾಶವಾಗಿಬಿಡುವ ಅಪಾಯವನ್ನು ತಡೆಗಟ್ಟಲು ಸತತ ಹೋರಾಟವನ್ನು ಕೈಗೊಂಡರು. ಅಖಿಲ ಭಾರತ ಪರಿಶಿಷ್ಟ ಜಾತಿ ಸಂಘಟನೆಯನ್ನು ಕಟ್ಟಿ ಆದರ ಮೂಲಕ ಸ್ವಾತಂತ್ರ್ಯ ಮೇಲ್ಜಾತಿಗಳ ಗುತ್ತಿಗೆಯಾಗದಂತೆ ನೋಡಿಕೊಳ್ಳಲು ಶ್ರಮಿಸಿದರು. ಸಂವಿಧಾನ ರಚನಾ ಸಭೆಗೆ ಚುನಾಯಿತಗೊಂಡು, ಸಂವಿಧಾನದ ಕರಡು ತಯಾರಿಸುವ ಸಮಿತಿಯ ಅಧ್ಯಕ್ಷರಾಗಿ ದಲಿತ ಹೋರಾಟದ ಸಾಧನೆಗಳನ್ನೆಲ್ಲಾ ರಕ್ಷಿಸಿಕೊಂಡು ಬಂದದ್ದಲ್ಲದೆ ಸ್ವತಂತ್ರ ಭಾರತದ ಸಂವಿಧಾನದ ರೂಪರೇಷೆಗಳನ್ನು ನಿರ್ಧರಿಸುವಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ.

ಸ್ವಾತಂತ್ರ್ಯಾನಂತರ ದಲಿತರಿಗೆ ಸಂವಿಧಾನಾತ್ಮಕವಾಗಿ ವಿಶೇಷ ಸೌಲಭ್ಯಗಳನ್ನು ಖಚಿತಗೊಳಿಸಿದರೂ, ದಲಿತ ವಿಮೋಚನೆಯ ಗುರಿ ತಾವಿನ್ನೂ ಸಾಧಿಸಲಾಗಿಲ್ಲ ಎನ್ನುವುದು ಅಂಬೇಡ್ಕರ್‌ರವರಿಗೆ ಸ್ಪಷ್ಟವಾಗಿತ್ತು. ಆದಕ್ಕಾಗಿಯೇ ಹೊಸ ಹೊಸ ಹಾದಿಗಳನ್ನು ಹುಡುಕುತ್ತಿದ್ದರು. ಆದರೆ ಅನಾರೋಗ್ಯದಿಂದ ಹಾಸಿಗೆ ಹಿಡಿಯಬೇಕಾದ ಕಾರಣ ಮನಸ್ಸಿನಲ್ಲಿದ್ದ ವಿಚಾರಗಳನ್ನು ಕ್ರಿಯಾರೂಪಕ್ಕಿಳಿಸಲು ಸಾಧ್ಯವಾಗಲಿಲ್ಲ. 1930ರಷ್ಟು ಹಿಂದೆಯೇ ನಾನು 'ಹಿಂದೂ ಆಗಿಯೇ ಸಾಯಲಾರೆ' ಎಂದು ಘೋಷಿಸಿದ್ದ ಅಂಬೇಡ್ಕರ್ ತಮ್ಮ ಕಾಲ ಮುಗಿಯುತ್ತಾ ಬಂತು ಎಂದು ತಿಳಿದೋ ಏನೋ 1954 ರಲ್ಲಿ ಲಕ್ಷಾಂತರ ಅನುಯಾಯಿಗಳೊಂದಿಗೆ ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧಧರ್ಮವನ್ನು ಸ್ವೀಕರಿಸಿದರು. ದಲಿತ ವಿಮೋಚನೆಗೆ ಸಾಮೂಹಿಕವಾಗಿ ಎಲ್ಲ ದಲಿತರೂ ಹಿಂದೂ ಧರ್ಮವನ್ನು ತ್ಯಜಿಸಬೇಕೆನ್ನುವುದನ್ನು ಅನೇಕ ಬಾರಿ ಸೂಚಿಸಿದ್ದರು. ಮತಾಂತರವಾದ ಎರಡು ತಿಂಗಳ ನಂತರ ಅಂಬೇಡ್ಕರ್ ಇಲ್ಲವಾದರು.

ಸಮಾಜ ಶಾಸ್ತ್ರಜ್ಞರಿಗೆ ಸವಾಲುಗಳು

ದಲಿತ ನಾಯಕರಾಗಿ, ಸಾಮಾಜಿಕ ರಾಜಕೀಯ ಹೋರಾಟಗಾರರಷ್ಟೇ ಯಲ್ಲ; ತಮ್ಮ ಯೂರೋಪಿನ ಉನ್ನತ ವ್ಯಾಸಂಗದಿಂದಾಗಿ ಸಮಾಜ ವಿಜ್ಞಾನಗಳ ಬಗೆಗೆ ಉನ್ನತ ತಿಳುವಳಿಕೆಯನ್ನು ಹೊಂದಿದ್ದರಿಂದ ಭಾರತದ ಪುರಾತನ ಕೃತಿಗಳನ್ನೂ, ಧರ್ಮಗಳನ್ನೂ ಅಭ್ಯಸಿಸಿ ಸಂಶೋಧನೆ ನಡೆಸಿದ್ದಾರೆ. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ನಡೆಸುತ್ತಿರುವಾಗಲೇ 'ಭಾರತದಲ್ಲಿ ಜಾತಿಗಳು' ಎನ್ನುವ ದೀರ್ಘಲೇಖನವನ್ನು ಬರೆದು ಮಂಡಿಸಿದ್ದರು. ಅವರ 'ಶೂದ್ರರು ಯಾರು' ಮತ್ತು 'ಅಸ್ಪೃಶ್ಯರು' ಎನ್ನುವ ಎರಡು ಪ್ರಮುಖ ಗ್ರಂಥಗಳಲ್ಲಿ ಜಾತಿಪದ್ಧತಿ ಹಾಗೂ ಅಸ್ಪೃಶ್ಯತೆಯ ಮೂಲಕಾರಣಗಳನ್ನು ಶೋಧಿಸಿ ತಮ್ಮದೇ ಆದ ದೃಷ್ಟಿಕೋನ ಹಾಗೂ ವಿವರಣೆಯ ಮೂಲಕ ಅನೇಕ ಸಮಾಜಶಾಸ್ತ್ರಜ್ಞರು ಮತ್ತು ಇತಿಹಾಸಕಾರರಿಗೆ ಸವಾಲುಗಳನ್ನು ಎಸೆದಿದ್ದಾರೆ. ಭಾರತದ ಎಡಪಂಥೀಯರೂ ಅಂಬೇಡ್ಕರ್‌ರವರ ಚಿಂತನೆ ಹಾಗೂ ಕಾರ್ಯಗಳನ್ನು ಅಭ್ಯಸಿಸಬೇಕಾಗಿದೆ.

(7ನೇ ಪುಟ ನೋಡಿ)

ಸೋವಿಯೆಟ್ ಯೂನಿಯನ್ ಕಮ್ಯುನಿಸ್ಟ್ ಪಾರ್ಟಿಯ ೨೬ನೇ ಸಮ್ಮೇಳನ ಕುರಿತು

ಸೋವಿಯೆಟ್ ಯೂನಿಯನ್‌ನ ಕಮ್ಯುನಿಸ್ಟ್ ಪಕ್ಷ (CPSU) 26ನೇ ಸಮ್ಮೇಳನ ನಡೆಸಿತು. ಈ ಹಿಂದಿನ ಪಾರ್ಟಿ ಸಮ್ಮೇಳನ ಐದು ವರ್ಷಗಳ ಹಿಂದೆ ಫೆಬ್ರುವರಿ 1976ರಲ್ಲಿ ಜರುಗಿತ್ತು. ಜಗತ್ತಿನಾದ್ಯಂತ ಸೋವಿಯೆಟ್ ಯೂನಿಯನ್‌ನ ಮಿತ್ರರು ಹಾಗೂ ಶತ್ರುಗಳು, ಕಮ್ಯುನಿಸ್ಟರು ಹಾಗೂ ಕಮ್ಯುನಿಸ್ಟ್ ವಿರೋಧಿಗಳು ಸೋವಿಯೆಟ್ ಯೂನಿಯನ್‌ನೊಳಗಿನ ಬೆಳವಣಿಗೆಗಳನ್ನು ಕುರಿತಾದಂತೆ ಅತೀವ ಆಸಕ್ತಿವಹಿಸುತ್ತಾರೆ. ಕಮ್ಯುನಿಸ್ಟರು ಹಾಗೂ ಮಿತ್ರರು ಆಸಕ್ತಿವಹಿಸಲು ಕಾರಣ ಸಮಾಜದ ಉದ್ಧಾರ ಮತ್ತು ಜಾಗತಿಕ ಮಟ್ಟದಲ್ಲಿ ಸಮಾಜವಾದ ಹಾಗೂ ಸಮತಾವಾದದ ಸ್ಥಾಪನೆಯತ್ತ ಮಾನವಕುಲದ ಮುನ್ನಡೆಯಲ್ಲಿ ಈ ಪ್ರಥಮ ಹಾಗೂ ಮಹಾನ್ ಸಮಾಜವಾದೀ ದೇಶ ವಹಿಸಬೇಕಾಗಿರುವ ಚಾರಿತ್ರಿಕ ಪಾತ್ರ. ಸೋವಿಯೆಟ್ ಯೂನಿಯನ್‌ನ ಸರ್ವತೋಮುಖ ಬೆಳವಣಿಗೆ ತಮಗೆ ವಿಪತ್ತಿನ ಸೂಚನೆಯೆಂದು ಭಾವಿಸಿರುವುದು ಕಮ್ಯುನಿಸ್ಟ್ ವಿರೋಧಿಗಳು ಹಾಗೂ ಶತ್ರುಗಳು ವ್ಯಕ್ತಪಡಿಸುವ ಆಸಕ್ತಿಗೆ ಕಾರಣ.

ರಷ್ಯಾದ ಕಮ್ಯುನಿಸ್ಟ್ ಚಳುವಳಿ ಆಗಲೇ ಸುಮಾರು ಒಂದು ಶತಮಾನವನ್ನು ಹಾದು ಬಂದಿದೆ. 1883ರಲ್ಲಿ ಪ್ರಖ್ಯಾತ ರಶಿಯನ್ ಮಾರ್ಕ್ಸ್‌ವಾದಿ ಪ್ಲೆಖನೋವ್ ಅವರ ನಾಯಕತ್ವದಲ್ಲಿ ಮೊದಲ ರಷಿಯನ್‌ಮಾರ್ಕ್ಸ್‌ವಾದಿ ಗುಂಪು ತಲೆಯೆತ್ತಿತು. 63 ವರ್ಷಗಳ ಹಿಂದೆ 1917ರಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿಯ ವಿಜಯದ ನಂತರ ರಷಿಯನ್ ಸಮಾಜವಾದೀ ಕ್ರಾಂತಿ ಜಯಶಾಲಿಯಾಗಿ ಮುಂದುವರಿಯಿತು. ರಷ್ಯಾದ ಕಾರ್ಮಿಕವರ್ಗ ಹಾಗೂ ಜನತೆಯ ಅಗಾಧ ತ್ಯಾಗ, ಬಲಿದಾನ, ಹಲವು ದಶಕಗಳಲ್ಲಿ ಸಂಚಿತಗೊಂಡ ರಷ್ಯಾದ ಕಮ್ಯುನಿಸ್ಟರ ಸಮೃದ್ಧ ಹಾಗೂ ವೈವಿಧ್ಯಮಯ ಅನುಭವಗಳು ಹಾಗೂ ವರ್ಗವಿಹೀನ ಸಮಾಜವಾದೀ ಸಮಾಜವನ್ನು ಕಟ್ಟುವುದಕ್ಕೆ ಅವರು ಕೊಟ್ಟ ಹಾಗೂ ಈಗಲೂ ಕೊಡುತ್ತಿರುವ ವಿಶಿಷ್ಟ ಕಾಣಿಕೆ ಇವೆಲ್ಲಾ ಮಾನವೇತಿಹಾಸದಲ್ಲಿ ವಿಶಿಷ್ಟ ಮೈಲಿಗಲ್ಲಾಗಿ ನಿಂತಿವೆ.

ಮನುಷ್ಯನಿಂದ ಮನುಷ್ಯನ, ವರ್ಗದಿಂದ ವರ್ಗದ, ದೇಶದಿಂದ ದೇಶದ ಶೋಷಣೆಯನ್ನು ಕೊನೆಗೊಳಿಸಿ ಹಿಂಸೆ ಮತ್ತು ಯುದ್ಧಗಳಿಲ್ಲದ ಹೊಸ ಜಾಗತಿಕ ಸಮಾಜ ಉದಯಿಸುವಂತೆ ಹಾಗೂ ಮಾನವಕುಲ ಪ್ರಕೃತಿಯ ಗುಟ್ಟುಗಳ ಮೇಲೆ ಸತತ ವಿಜಯ ಸಾಧಿಸುತ್ತಾ ಅವುಗಳನ್ನು ಮಾನವತೆಯ ಸೇವೆಗೆ ಅರ್ಪಿಸಲು ಅವಕಾಶವಾಗುವಂತಹ ಹೊಸ ಸೀಮಿತ ದೃಷ್ಟಿಪಥಗಳನ್ನು ತೆರೆಯುವಂತೆ ಮಾಡುವ ಮಹಾನ್ ಉದ್ದೇಶ ಸಾಧನೆಗೆ ಅವರು ಸಲ್ಲಿಸಿದ ಹಾಗೂ ಈಗಲೂ ಸಲ್ಲಿಸುತ್ತಿರುವ ಕಾಣಿಕೆಯೊಂದಿಗೆ ಹೋಲಿಸಿದಾಗ ಅವರು ಮಾಡಿದ ತಪ್ಪುಗಳು ಮತ್ತು ಅದರ ಪರಿಣಾಮವಾಗಿ ರಷ್ಯಾದ ಹಾಗೂ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ ಅನುಭವಿಸಬೇಕಾದ ನಷ್ಟ ನಗಣ್ಯವೆನಿಸುತ್ತದೆ.

ವರ್ತಮಾನದ ಪ್ರಶ್ನೆಗಳು

ಸೋವಿಯೆಟ್ ಯೂನಿಯನ್ ಕಮ್ಯುನಿಸ್ಟ್ ಪಾರ್ಟಿಯ ಮಹಾ ಕಾರ್ಯದರ್ಶಿಯವರು 26ನೇ ಸಮ್ಮೇಳನದ ಮುಂದಿಟ್ಟ ವರದಿ ಒಂದು ಗಂಭೀರ ದಸ್ತಾವೇಜು. ಅದರಲ್ಲಿ ಆಂತರಿಕ ಹಾಗೂ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಪರಿಶೀಲಿಸಲಾಗಿದೆ. ಅಲ್ಲದೆ ಸಮಕಾಲೀನ ಸೋವಿಯೆಟ್ ಸಮಾಜ, ಸಮಾಜವಾದೀ ಜಗತ್ತು, ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ, ಜಾಗತಿಕ ಬಂಡವಾಳಶಾಹೀ ಬಿಕ್ಕಟ್ಟು ಹಾಗೂ ಸಾಮ್ರಾಜ್ಯಶಾಹೀ, ಅಣುಯುದ್ಧದ ಅಪಾಯ ಮತ್ತು ಜಾಗತಿಕ ಶಾಂತಿಯ ಮಹತ್ವ ಹೀಗೆ ವ್ಯಾಪಕ ವಿಷಯಗಳು, ವಿವಾದಾಂಶಗಳನ್ನು ಇದರಲ್ಲಿ ಪರಿಶೀಲಿಸಲಾಗಿದೆ. ಈ ದೊಡ್ಡ ವರದಿಯಲ್ಲಿ ಕಾಣಿಸಿಕೊಂಡಿರುವ ಎಲ್ಲಾ ಅಂಶಗಳ ಮೇಲೆ ವ್ಯಾಖ್ಯಾನ ಮಾಡುವುದು ಸಾಧ್ಯವಿಲ್ಲ. ಅದು ನಮ್ಮ ಉದ್ದೇಶವೂ ಅಲ್ಲ. ಸೋವಿಯೆಟ್ ಒಕ್ಕೂಟದ ಆರ್ಥಿಕ, ರಾಜಕೀಯ, ಸೈದ್ಧಾಂತಿಕ ಹಾಗೂ ಸಾಮಾಜಿಕ ಜೀವನದ ಇನ್ನೂ ಹಲವಾರು ಆಯಾಮಗಳು ಇತ್ಯಾದಿ ಆಂತರಿಕ ಬೆಳವಣಿಗೆಗಳ ಬಗ್ಗೆ ಇಲ್ಲಿ ಅಭಿಪ್ರಾಯವನ್ನು ಸೂಚಿಸದೆ ನಮ್ಮ ಅವಲೋಕನವನ್ನು ಜಗತ್ತಿನ ಎಲ್ಲ ಕಮ್ಯುನಿಸ್ಟರಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಮಾತ್ರ ಸೀಮಿತಗೊಳಿಸಬಯಸುತ್ತೇವೆ.

ಲಿಯೋನಿಡ್ ಬ್ರೆಜ್ನೇವ್ ಅವರು ತಮ್ಮ ವರದಿಯಲ್ಲಿ "ನಾವು ಸೋದರ ಪಾರ್ಟಿಗಳಿಗೆ ನಮ್ಮ ಆಂತರಿಕ ಬೆಳವಣಿಗೆಗಳು ಹಾಗೂ ವಿದೇಶಾಂಗ ನೀತಿಯ ಕ್ಷೇತ್ರದಲ್ಲಿ ನಮ್ಮ ಕಾರ್ಯಗಳ ಬಗ್ಗೆ ನಿಯಮಿತವಾಗಿ ಸಾರಾಂಶ ತಿಳಿಸುತ್ತಾ ಇದ್ದೆವು" ಎಂದಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದೀ)ವು ಸೋವಿಯೆಟ್ ಕಮ್ಯುನಿಸ್ಟ್ ಪಾರ್ಟಿಯೊಂದಿಗೆ ಪಾರ್ಟಿ ಮಟ್ಟದ ಸಂಬಂಧಹೊಂದಿಲ್ಲ ಮತ್ತು ಇಂತಹ ಸಾರಾಂಶ ತಿಳಿಯುವ ಸೌಲಭ್ಯವನ್ನು ಪಡೆದಿಲ್ಲ. ಆದ್ದರಿಂದ ನಮ್ಮ ವೀಕ್ಷಣೆಗಳು ಸ್ವಾಭಾವಿಕವಾಗಿಯೇ ನಮಗೆ ಸಿಕ್ಕ ಸಮಾಚಾರಗಳ ಮೇಲೆ ಆಧಾರಿತವಾಗಿವೆ. ಇಷ್ಟೇ ಅಲ್ಲ ಸಮ್ಮೇಳನ ಮಂಡಿಸಿದ ವರದಿಯ ಕೆಲವು ಹೇಳಿಕೆಗಳು ಉಲ್ಲಾಸದಾಯಕವೂ, ಉತ್ಸಾಹದಾಯಕವೂ ಆಗಿರುವುದರಿಂದ ಅವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತೆ ಉತ್ತೇಜಿಸುತ್ತವೆ.

ಬ್ರೆಜ್ನೇವ್ ಹೇಳುತ್ತಾರೆ: "ನಮ್ಮ ದೇಶದ ಬೆಳವಣಿಗೆಗಳ ಪ್ರತ್ಯೇಕ ಮೂರ್ತ ರೂಪಗಳ ಬಗ್ಗೆ ಕೆಲವೊಮ್ಮೆ ಕೆಲವು ಕಮ್ಯುನಿಸ್ಟ್ ಪಕ್ಷಗಳಲ್ಲಿ ವಿಮರ್ಶಾತ್ಮಕ ತೀರ್ಪಿನ ಸ್ವರಕೇಳಬಂದಿವೆ" ಮತ್ತು "ನಾವು ಸಂಗಾತಿಗಳ ರಚನಾತ್ಮಕ ಟೀಕೆಗಳಿಗೆ ಗಮನಕೊಡುತ್ತೇವೆ. ಆದರೆ ಸಮಾಜವಾದೀ ವಾಸ್ತವತೆಯನ್ನು ವಿರೂಪಗೊಳಿಸಿ ಆ ಮೂಲಕ ತಮಗೆ ತಿಳಿದೋ, ತಿಳಿಯದೆಯೋ ಸಾಮ್ರಾಜ್ಯಶಾಹಿಗಳ ಅಪಪ್ರಚಾರಕ್ಕೆ ಒಳ್ಳೇ ಗ್ರಾಸ ಒದಗಿಸುವ 'ವಿಮರ್ಶೆ'ಗಳನ್ನು ಖಡಾಖಂಡಿತವಾಗಿ ವಿರೋಧಿಸುತ್ತೇವೆ"ಎಂದೂ ಅವರು ಹೇಳುತ್ತಾರೆ. ನಮಗೆ ಇಂತಹ 'ವಿಮರ್ಶೆ'ಗಳ ಅರಿವಿದೆ. ಸಮಾಜವಾದಕ್ಕೆ ಕೆಡುಕುಂಟು ಮಾಡುವ ಸಾಮ್ರಾಜ್ಯಶಾಹಿಯನ್ನು ಸಂತೃಪ್ತಗೊಳಿಸುವ ಅಥವಾ ಪ್ರೋತ್ಸಾಹ ಕೊಡುವ ಇಂತಹ ವಿಮರ್ಶೆಗಳನ್ನು ನಾವು ದ್ವೇಷಿಸುತ್ತೇವೆ. ಅಲ್ಲದೆ ಇಲ್ಲಿ 1960ರ ದಶಕದಲ್ಲಿ ಸೋವಿಯೆಟ್ ಯೂನಿಯನ್‌ನ ಕಮ್ಯುನಿಸ್ಟ್ ಪಾರ್ಟಿ ಹೂಡಿದ ವಾದಗಳು, ಸೈದ್ಧಾಂತಿಕ ಸೂತ್ರಗಳ ಬಗ್ಗೆ[ಸಿ.ಪಿ.ಐ.(ಎಂ)]

ಎಂ. ಬಸವ ಪುನ್ನಯ್ಯ

ವ್ಯಕ್ತಪಡಿಸಿದ ಭಿನ್ನಾಭಿಪ್ರಾಯಗಳ ಲೆಕ್ಕಾಚಾರಮಾಡುವುದು ನಮ್ಮ ಉದ್ದೇಶವಲ್ಲ.

ಇನ್ನಷ್ಟು ಬಿಗಿವಾತಾವರಣ

ಬ್ರೆಜ್ನೇವ್‌ರ ವರದಿ ಅಂತರಾಷ್ಟ್ರೀಯ ಪರಿಸ್ಥಿತಿಯಲ್ಲಿ ಬಿಗುವು ಮತ್ತಷ್ಟು ಹೆಚ್ಚಿರುವುದನ್ನು ಚರ್ಚಿಸುತ್ತದೆ. (CPSU)ನ ಹಿಂದಿನ ಸಮ್ಮೇಳನದ ನಂತರದ ವರ್ಷಗಳಲ್ಲಿ ಹೆಚ್ಚುತ್ತಿರುವ ಅತಿಪ್ರಸರಣ ಹಾಗೂ ನಿರುದ್ಯೋಗ, ದೇಶಗಳ ಸಂದಾಯ ಬಾಕಿಯ ವಿಷಯದಲ್ಲಿ ಉಂಟಾಗಿರುವ ತೀವ್ರ ಅವನತಿ, ರಕ್ಷಣಾ ವೆಚ್ಚದಲ್ಲಿನ ಹೆಚ್ಚಳ ಇತ್ಯಾದಿ ಬಂಡವಾಳಶಾಹಿಯ ಸಾರ್ವತ್ರಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿಗಳಿಂದ, ಅದರಲ್ಲೂ ವಿಶೇಷವಾಗಿ ಅಮೇರಿಕಾದ ಸಾಮ್ರಾಜ್ಯಶಾಹಿಗಳಿಂದ ಜಾಗತಿಕ ಶಾಂತಿಗೆ ಹೆಚ್ಚುತ್ತಿರುವ ಬೆದರಿಕೆಯನ್ನು ಈ ವರದಿ ಚರ್ಚಿಸುತ್ತದೆ.

ಒಡಂಬಡಿಕೆ (detente), ಶಸ್ತ್ರಾಸ್ತ್ರಗಳ ಮೇಲೆ ಮಿತಿ ಹಾಗೂ ಸೋವಿಯೆಟ್ ಯೂನಿಯನ್ ಮತ್ತಿತರ ಸಮಾಜವಾದೀ ದೇಶಗಳೊಂದಿಗೆ ಸಂಬಂಧ ಸುಧಾರಿಸುವುದು ಇವನ್ನೆಲ್ಲಾ ವಿರೋಧಿಸುವವರ ಚಟುವಟಿಕೆ ಬೆಳೆಯುತ್ತಿರುವುದರ ಕಡೆಗೆ ಈ ವರದಿ ಎಲ್ಲರ ತೀವ್ರಗಮನ ಸೆಳೆಯುತ್ತದೆ. ಸೀಮಿತ ಅಣುಯುದ್ಧ ನಡೆಯಬೇಕೆನ್ನುವ ಕಲಹಪ್ರಿಯ ಪ್ರಚಾರಕರಿಗೆ ಎಚ್ಚರಿಕೆ ಕೊಡುತ್ತಾ ಅಮೇರಿಕದ ಯುದ್ಧಾಸಕ್ತರು ಸಲಹೆ ಮಾಡುವಂತೆ "ಸೀಮಿತ" ಅಣುಯುದ್ಧವೇನಾದರೂ ನಡೆದರೆ "ಅದು ಆರಂಭದಿಂದಲೇ ಯುರೋಪಿನ ನಾಗರೀಕತೆ ಖಂಡಿತವಾಗಿ ನಾಶವಾಗುತ್ತದೆ ಎಂಬುದನ್ನೇ ಸೂಚಿಸುತ್ತವೆ" ಎಂದು ಈ ವರದಿ ಹೇಳುತ್ತದೆ.

ಪಶ್ಚಿಮ ಯುರೋಪಿನಲ್ಲಿ ಹೊಸ ಅಮೇರಿಕನ್ ಅಣುಕ್ಷಿಪಣಿಗಳನ್ನು ಪೇರಿಸಿಡಬೇಕೆಂಬ ನಾಟೋ(NATO ಉತ್ತರ ಅಟ್ಲಾಂಟಿಕ್ ಸಂಧಿ ಸಂಘಟನೆ)ದ ನಿರ್ಧಾರದ ಬಗ್ಗೆ ಹೇಳುತ್ತಾ CPSUನ ಮಹಾ ಕಾರ್ಯದರ್ಶಿಯವರು "ಸೋವಿಯೆಟ್ ಒಕ್ಕೂಟ ಹಾಗೂ ಅದರ ಮಿತ್ರ ದೇಶಗಳನ್ನು ಗುರಿಮಾಡಿಟ್ಟುಕೊಂಡು ಜರ್ಮನ್ ಗಣತಂತ್ರ ಒಕ್ಕೂಟ (FRG), ಇಟಲಿ, ಬ್ರಿಟನ್, ನೆದರ್‌ಲೇಂಡ್ಸ್ ಅಥವಾ ಬೆಲ್ಜಿಯಮ್‌ನಲ್ಲಿ ಅಮೇರಿಕನ್ ಅಣುಕ್ಷಿಪಣಿಗಳನ್ನು ನೆಟ್ಟರೆ ಈ ದೇಶಗಳೊಂದಿಗೆ ಇಲ್ಲಿನ ನಮ್ಮ ಸಂಬಂಧಕ್ಕೆ ತೊಂದರೆಯನ್ನುಂಟು ಮಾಡುವುದು ಖಚಿತ. ಇದು ಆ ದೇಶಗಳ ಭದ್ರತೆಗೆ ಯಾವ ರೀತಿ ಕೇಡುಂಟು ಮಾಡಬಹುದೆಂಬುದರ ಬಗ್ಗೆ ಏನೂ ಹೇಳದಿರುವುದೇ ಒಳ್ಳೆಯದು" ಎಂದು ಸಂಶಯಕ್ಕೆಡೆಯಿಲ್ಲದಂತೆ ಸ್ಪಷ್ಟಗೊಳಿಸಿದ್ದಾರೆ. "ಆ ದೇಶಗಳ ಸರಕಾರಗಳು ಹಾಗೂ ಪಾರ್ಲಿಮೆಂಟುಗಳು ಈ ಎಲ್ಲಾ ವಿಷಯವನ್ನು ಮತ್ತೆ ಮತ್ತೆ ತೂಗಿಸಿ ನೋಡಲೇಬೇಕು" ಎಂದು ಎಚ್ಚರಿಸುತ್ತಾರೆ ಅವರು.

ಹದಗೆಡುತ್ತಿರುವ ಅಂತರಾಷ್ಟ್ರೀಯ ಪರಿಸ್ಥಿತಿ, ಶಸ್ತ್ರಾಸ್ತ್ರ ಸ್ಪರ್ಧೆ ಮತ್ತೆ ಆರಂಭವಾಗುವ ಬೆದರಿಕೆ ಮಾತ್ರವಲ್ಲ ಅಣುಯುದ್ಧದ ಭೀತಿಯ ಬಗ್ಗೆ ವ್ಯಕ್ತಪಡಿಸಿರುವ ತೀವ್ರ ವಿಷಾದದಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷವೂ ಸೋವಿಯೆಟ್ ಯೂನಿಯನ್ ಕಮ್ಯುನಿಸ್ಟ್ ಪಕ್ಷದೊಂದಿಗೆ ಪಾಲುಗೊಳ್ಳುತ್ತದೆ. ಹೊಸದಾಗಿ ಚುನಾಯಿತರಾದ ಅಧ್ಯಕ್ಷ ರೇಗನ್ ಮತ್ತು ಆತನ ಪಂಗಡ ಪ್ರತಿನಿಧಿಸುವ ಅಮೇರಿಕಾದ ಆಳುವ ವಲಯಗಳ ಅತೀ ಬಲಪಂಥೀಯರ ವಿಜಯ ಯುದ್ಧದ ಅಪಾಯವನ್ನು ಮತ್ತಷ್ಟು ಹೆಚ್ಚಿಸಿದೆ ಮತ್ತು ಇದು ಈ ಅಪಾಯಕಾರೀ ಪ್ರವೃತ್ತಿಯ ವಿರುದ್ಧ ಹೋರಾಟದ ಜರೂರನ್ನು ಹೆಚ್ಚಿಸಿದೆ.

"ಸೋವಿಯೆಟ್ ಒಕ್ಕೂಟ ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನದ ನಡುವೆ, ವಾರ್ತಾಸಂಧಿ ಮತ್ತು ನಾಟೋ ಮಧ್ಯೆ ಇರುವ ಸೈನಿಕ ಹಾಗೂ ಶಸ್ತ್ರಾಸ್ತ್ರ ಸಮತೋಲನ ವಸ್ತುತಃ ಜಾಗತಿಕ ಶಾಂತಿಯನ್ನು ಕಾಪಾಡುತ್ತಿದೆ" ಎಂದು CPSU ವರದಿಯಲ್ಲಿ ಭರವಸೆಯಿಂದ ಕೊಡಿದ ಹಾಗೂ ಸರಿಯಾದ ಪ್ರತಿಪಾದನೆ ನಿಜಕ್ಕೂ ಸ್ವಾಗತಾರ್ಹ. ಜಾಗತಿಕ ಶಾಂತಿ ಮತ್ತು ಅಂತರಾಷ್ಟ್ರೀಯ ಸಮಾಜವಾದ ಮತ್ತು ಸಮತಾವಾದವನ್ನು ಪ್ರೀತಿಸುವವರೆಲ್ಲರಿಗೂ ಇದು ನಿಜವಾಗಿಯೂ ಆನಂದವನ್ನುಂಟು ಮಾಡಿದೆ.

ಯುದ್ಧಾಸಕ್ತರಿಗೆ ಎಚ್ಚರಿಕೆ

ಅಮೇರಿಕಾದ ಯುದ್ಧಕಾತರ ವಲಯಗಳಿಗೆ ಎಚ್ಚರಿಕೆ ಕೊಡುತ್ತಾ ಬ್ರೆಜ್ನೇವ್ ಖಚಿತವಾದ ಮಾತುಗಳಲ್ಲಿ ಹೀಗೆಂದಿದ್ದಾರೆ- "ನಾವು ಆ ಇನ್ನೊಂದು ಕಡೆಯವರ ಮೇಲೆ ಸೈನಿಕ ಮೇಲ್ಮೆಯನ್ನು ಎಂದೂ ಬಯಸಿಲ್ಲ, ಈಗಲೂ ಬಯಸುವುದಿಲ್ಲ. ಅದು ನಮ್ಮ ಧೋರಣೆಯಲ್ಲ. ಅದೇ ಸಮಯದಲ್ಲಿ ನಮ್ಮ ಮೇಲೆ ಈ ರೀತಿಯ ಮೇಲ್ಮೆಯನ್ನು ಸ್ಥಾಪಿಸಲು ಬಿಡುವುದೂ ಇಲ್ಲ. ಆ ರೀತಿಯ ಪ್ರಯತ್ನಗಳು ಅಥವಾ ಶಕ್ತಿಶಾಲೀ ನಿಲುವಿನಿಂದ ನಮ್ಮೊಡನೆ ಮಾತಾಡುವುದು ಒಮ್ಮೆಲೇ ನಿರರ್ಥಕ. ಶಸ್ತ್ರಾಸ್ತ್ರ ಸ್ಪರ್ಧೆಯಲ್ಲಿ ಒಬ್ಬರನ್ನೊಬ್ಬರು ಮೀರಿಸುವುದು ಅಥವಾ ಅಣುಯುದ್ಧದಲ್ಲಿ ಗೆಲುವಿನ ನಿರೀಕ್ಷೆಯಿಟ್ಟುಕೊಳ್ಳುವುದು ಅಪಾಯಕಾರೀ ಹುಚ್ಚಾಟ".

ಅಮೇರಿಕಾ ಮತ್ತು ಸೋವಿಯೆತ್ ಯೂನಿಯನ್ನಿನ ನಾಯಕರ ನಡುವೆ

ಉಜ್ಜಮಟ್ಟದ ಮಾತುಕತೆಗಳಿಗೆ ಯಾವ ಪೂರ್ವಶರತ್ತೂ ಹಾಕದೆ ಕರೆ ಕೊಟ್ಟಿರುವುದು ಸಮಯೋಚಿತ, ದೂರದೃಷ್ಟಿಯ ಹಾಗೂ ಗೌರವಪೂರ್ಣ ನಿಲುವು. ಜಾಗತಿಕ ಶಾಂತಿಗಾಗಿ ಮತ್ತು ಶಸ್ತ್ರಾಸ್ತ್ರ ಸ್ಪರ್ಧೆ ಕೊನೆಗೊಳಿಸಲು ಮಾತುಕತೆಗಳಿಗಾಗಿ ಮಂಡಿಸಿದ ಸೂಚನೆಗಳು ಸಂಪೂರ್ಣ ಹೊಸದಲ್ಲವಾದರೂ ವಾದಾತೀತ. ಅಣುಯುದ್ಧದ ಅಪಾಯಕಾರೀ ಜೂಜಾಟಕ್ಕೆ ಕಾತರರಾಗಿರುವ ಅಮೇರಿಕಾದ ಸಾಮ್ರಾಜ್ಯಶಾಹಿಗಳನ್ನು ಸೇರಿಸಲು ಸಮಾಜವಾದೀ ಜಗತ್ತು, ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳವಳಿ ಹಾಗೂ ಜಾಗತಿಕ ಶಾಂತಿ ಬಯಸುವ ಮತ್ತು ವಸಾಹತುಶಾಹಿಗೆ ವಿರೋಧಿಯಾಗಿರುವ ಎಲ್ಲಾ ಶಕ್ತಿಗಳು ತಮ್ಮ ಹೋರಾಟಗಳನ್ನು ದ್ವಿಗುಣಗೊಳಿಸಬೇಕು.

ವಾರ್ಸಾ ಸಂಧಿಯ ದೇಶಗಳ ಐಕ್ಯ ಹಾಗೂ ಹೊಂದಾಣಿಕೆ ಬಗ್ಗೆ ಹೇಳುತ್ತಾ CPSUನ ಸಮ್ಮೇಳನದ ಈ ವರದಿ "ಸಂಯುಕ್ತ ಸಶಸ್ತ್ರ ಸೇನೆಯ ಬೆಳವಣಿಗೆ ಏನೆಂದೂ ತೊಡಕಿಲ್ಲದೆ ಮುಂದುವರಿದಿದೆ" ಎಂದು ಜಗತ್ತಿನ ಜನತೆಗೆ ಆಶ್ವಾಸನೆ ಕೊಡುತ್ತದೆ ಮತ್ತು "ಸಮಾಜವಾದೀ ದೇಶಗಳ ರಕ್ಷಣಾತ್ಮಕವಾದ ಈ ರಾಜಕೀಯ ಹಾಗೂ ಸೈನಿಕ ಮಿತ್ರಕೂಟ ಶಾಂತಿಯ ಉದ್ದೇಶ ಸಾಧನೆಗಾಗಿ ವಿಧೇಯ ಸೇವೆ ಸಲ್ಲಿಸುತ್ತಿದೆ ಮತ್ತು ಇದು ನಮ್ಮ ಜನರ ಸಮಾಜವಾದೀ ಸಾಧನೆಗಳನ್ನು ರಕ್ಷಿಸುತ್ತದೆ ಎಂದು ನಂಬುಗೆ ಇಡಬಹುದಾದ ಎಲ್ಲಾ ಗುಣಗಳೂ ಇದರಲ್ಲಿವೆ" ಎಂದು ಕೇಂದ್ರ ಸಮಿತಿ ಪಾರ್ಟಿ ಸಮ್ಮೇಳನಕ್ಕೆ ವರದಿ ಮಾಡಿದೆ.

ಮಹತ್ವಪೂರ್ಣವಾದ ಅಂಶವೆಂದರೆ ಯಾವುದೇ ಸಂತೃಪ್ತ ಚಿತ್ರಣವನ್ನು ಕೊಡದೆ ವರದಿ "ಸಂಗಾತಿಗಳೇ ಸನ್ಮದ ಸಮಾಜವಾದೀ ಜಗತ್ತನ್ನು ಉಜ್ವಲ ಬಣ್ಣಗಳಿಂದ ಚಿತ್ರಿಸುವ ಪ್ರವೃತ್ತಿ ನಮ್ಮಿಂದ ಬಹಳ ದೂರದಲ್ಲಿರಲಿ. ನಮ್ಮ ದೇಶಗಳ ಬೆಳವಣಿಗೆಯಲ್ಲಿ ತೊಡಕುಗಳೂ ಉಂಟಾಗುತ್ತವೆ. ಗಾಢವಾದ ಆರ್ಥಿಕ ಬೆಳವಣಿಗೆಯ ಕಡೆಗೆ ಮುಂದುವರಿಯುವುದು, ದೊಡ್ಡ ಪ್ರಮಾಣದ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಮತ್ತು ಸಮತಾವಾದೀ ಪ್ರಜ್ಞೆಯನ್ನು ಬೆಳೆಸುವುದು ಇವನ್ನೆಲ್ಲಾ ದಿನಬೆಳಗಾಗುವಷ್ಟರಲ್ಲಿ ಸಾಧಿಸಲಾಗುವುದಿಲ್ಲ" ಎಂದು ಹೇಳುತ್ತದೆ. ಈ ಸ್ವಯಂಟೀಕೆಯ ಮಾತುಗಳನ್ನು ನಾವು ಸರಿಯಾಗಿ ಗಮನಿಸಿದ್ದೇವೆ ಹಾಗೂ ಎಲ್ಲ ಸಮಾಜವಾದೀ ದೇಶಗಳು, ವಿಶೇಷವಾಗಿ ಸೋವಿಯೆಟ್ ಯೂನಿಯನ್ ಈ ತೊಡಕುಗಳನ್ನು ಹಾಗೂ ತೊಂದರೆಗಳನ್ನು ನಿವಾರಿಸಲು ಹೊಸದಾಗಿ ಮತ್ತು ದ್ವಿಗುಣಿತ ಉತ್ಸಾಹದಿಂದ ಪ್ರಯತ್ನಿಸುತ್ತಾರೆ ಮತ್ತು ತಮ್ಮನ್ನು ಇನ್ನಷ್ಟು ಭದ್ರವಾಗಿ ಒಟ್ಟಿಗೇ ಬೆಸೆದುಕೊಳ್ಳುತ್ತಾರೆ ಎಂದು ಆಶಿಸುತ್ತೇವೆ.

ಪೋಲಂಡಿನ ಘಟನೆಗಳು

CPSUನ 26ನೇ ಸಮ್ಮೇಳನದಲ್ಲಿ ಮಂಡಿಸಿದ ವರದಿ ಸಮಾಜವಾದೀ ಪೋಲಂಡಿನ ಇತ್ತೀಚಿನ ಘಟನೆಗಳನ್ನು ವಿಶೇಷವಾಗಿ ಪರಿಶೀಲಿಸಿದೆ. ಅದು "ಎಲ್ಲೆಲ್ಲಿ ಒಳಗಡೆ ತಪ್ಪು ಕ್ರಮಗಳು ಹಾಗೂ ತಪ್ಪು ಲೆಕ್ಕಾಚಾರದ ಧೋರಣೆಗಳೊಂದಿಗೆ ಸಾಮ್ರಾಜ್ಯಶಾಹಿಗಳ ಬುಡಮೇಲು ಮಾಡುವ ಚಟುವಟಿಕೆಗಳೂ ಸೇರಿಬಿಡುತ್ತವೋ ಅಲ್ಲಿ ಸಮಾಜವಾದಕ್ಕೆ ವಿರೋಧವಾದ ತತ್ವಗಳಿಗೆ ಉತ್ತೇಜನ ಸಿಗುವ ಪರಿಸ್ಥಿತಿ ಉಂಟಾಗುತ್ತದೆ" ಎಂದು ನೇರ ಮಾತುಗಳನ್ನಾಡಿದೆ. ತಪ್ಪುಕ್ರಮಗಳನ್ನು ಚೆನ್ನಾಗಿ ತಿಳಿಸುತ್ತಾ ವರದಿ ಹೀಗೆ ಇತ್ಯಾತ್ಮಕವಾಗಿ ಪ್ರತಿಪಾದಿಸುತ್ತದೆ-"ಪೋಲೆಂಡಿನ ಘಟನೆಗಳು ಪಕ್ಷಕ್ಕೆ ತನ್ನ ನಾಯಕತ್ವದ ಪಾತ್ರವನ್ನು ಬಲಗೊಳಿಸುವುದು, ಜನತೆಯ ಕೂಗಿಗೆ ಓಗೊಡುವುದು, ಅಧಿಕಾರಶಾಹೀ ತನ್ನಿಷ್ಟದಂತೆ ದಿನಚರ್ಯೆಯ ರೀತಿಯಲ್ಲಿ ವರ್ತಿಸುವುದನ್ನು ತಡೆಗಟ್ಟುವುದು ಸಮಾಜವಾದೀ ಪ್ರಜಾಪ್ರಭುತ್ವವನ್ನು ಸಕ್ರಿಯವಾಗಿ ಬೆಳೆಸುವುದು ಹಾಗೂ ವಿದೇಶಿ ಆರ್ಥಿಕ ಸಂಬಂಧಗಳಲ್ಲಿ ಸರಿಯಾಗಿ ಯೋಚಿಸಿದ ಹಾಗೂ ವಾಸ್ತವತೆಯನ್ನು ಗಮನಿಸಿದ ಧೋರಣೆಗಳನ್ನು ಅನುಸರಿಸುವುದು ಎಷ್ಟೊಂದು ಮಹತ್ವದ್ದು ಎಂಬುದನ್ನು ಇನ್ನೊಮ್ಮೆ ತೋರಿಸಿಕೊಟ್ಟಿವೆ".

ಈ ವೀಕ್ಷಣೆಗಳನ್ನು ಕೆಲವರು ಸೋದರ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಒಂದು ರೀತಿಯ 'ಮಧ್ಯಪ್ರವೇಶ' ಎಂದು ವಿಕೃತವಾಗಿ ವಿವರಿಸಲು ಉಪಯೋಗಿಸಬಹುದಾದರೂ, ಸಿ.ಪಿ.ಐ.(ಎಂ) ಈ ರೀತಿಯ ವಿಕೃತ ವಿವರಣೆಗಳನ್ನು ಒಪ್ಪುವುದಿಲ್ಲ, ಹಾಗೆ ಒಪ್ಪುವುದು ಸಾಧ್ಯವಿಲ್ಲ ಮತ್ತು ಅದನ್ನು ಒಂದು ಸೋದರ ಸಮಾಜವಾದೀ ರಾಷ್ಟ್ರ ಮತ್ತು ಅದರ ಆಳುವ ಕಮ್ಯುನಿಸ್ಟ್ ಪಕ್ಷಕ್ಕೆ ಸಂಬಂಧಪಟ್ಟಂತೆ ಶ್ರಮಜೀವಿಗಳ ಅಂತರಾಷ್ಟ್ರೀಯ ಕರ್ತವ್ಯವನ್ನು ಪರಿಪಾಲಿಸಿದಂತೆ ಎಂದು ತಿಳಿಯುತ್ತದೆ. ಪೋಲೀಷ್ ಸಂಯುಕ್ತ ಕಾರ್ಮಿಕ ಪಕ್ಷ "ಪೋಲಂಡಿನ ಸಮಾಜವಾದೀ ಪ್ರಭುತ್ವದ ಆಧಾರಸ್ತಂಭಗಳು ಗಂಡಾಂತರದಲ್ಲಿವೆ" ಎಂಬ ಹೇಳಿಕೆಯನ್ನು ತನಗೆ ಒಪ್ಪಿಗೆಯಂತೆ ಉದ್ಧರಿಸಿ ಈ ವರದಿಯಲ್ಲಿ ಪೋಲಂಡಿನ ಪರಿಸ್ಥಿತಿಯ ಗಂಭೀರತೆಯನ್ನು ತಿಳಿಸಲಾಗಿದೆ.

ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿವಾರಿಸುವಲ್ಲಿ ಪೋಲಂಡಿನ ಕಮ್ಯುನಿಸ್ಟರ ಪ್ರಯತ್ನಗಳ ಬಗ್ಗೆ ಭರವಸೆ ಹಾಗೂ ಆಶಯವನ್ನು ವ್ಯಕ್ತಪಡಿಸುತ್ತಾ CPSU ನ ಸಮ್ಮೇಳನ ಅವರಿಗೆ "ಸಮಾಜವಾದೀ ಪೋಲಂಡಿನ ಕಷ್ಟದ ಸಮಯದಲ್ಲಿ ನಾವು ಅದರ ಕೈಬಿಡುವುದಿಲ್ಲ. ನಾವು ಅವರ ಬೆನ್ನಿಗೇ ನಿಂತಿರುತ್ತೇವೆ" ಎಂದು ಭರವಸೆ ಕೊಡುತ್ತದೆ. ಈ ದೃಢ ಹಾಗೂ ಸೋದರ ಭರವಸೆಯಿಂದ ಪ್ರತಿಕ್ರಾಂತಿಕಾರಿ ಶಕ್ತಿಗಳಿಗೆ ಜಯವಾಗಲೆಂದು ಚಡಪಡಿಸುತ್ತಿರುವ ಸಾಮ್ರಾಜ್ಯಶಾಹೀ ವಲಯಗಳು ತಮ್ಮದೇ ಆದ ನಿರ್ಧಾರಕ್ಕೆ ಬರಬಹುದು ಮತ್ತು ತಮ್ಮ ಉತ್ತೇಜಕ ಚಟುವಟಿಕೆಗಳನ್ನು ನಿಲ್ಲಿಸಬಹುದು.

ಅಫಘಾನ್ ವಿವಾದದ ಬಗ್ಗೆ ಹೇಳುತ್ತಾ ಲಿಯೋನಿಡ್ ಬ್ರೆಜ್ನೇವ್‌ರ ವರದಿ ನೇರ ಮಾತುಗಳನ್ನಾಡುತ್ತದೆ. ಅಫಘಾನಿಸ್ತಾನದಲ್ಲಿ 'ಸೋವಿಯೆಟ್ ಅತಿಕ್ರಮಣ'ವಾಗಿದೆಯೆಂದು ಹಲವು ಸರಕಾರಗಳು, ವಿಶೇಷವಾಗಿ ಅಮೇರಿಕಾದ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳು ಬೊಬ್ಬೆಹಾಕುತ್ತಿದ್ದರೂ ಸೋವಿಯೆಟ್ ನಾಯಕತ್ವ "ಸಾಮ್ರಾಜ್ಯಶಾಹಿಯು ಅಫಘಾನ್ ಕ್ರಾಂತಿ ವಿರುದ್ಧ ನಿಜವಾಗಿಯೂ ಅಘೋಷಿತ ಯುದ್ಧವನ್ನೇ ಸಾರಿತು. ಅದು ನಮ್ಮ ದಕ್ಷಿಣ ಗಡಿಗೆ ಒಂದು ನೇರ ಬೆದರಿಕೆಯನ್ನು ಉಂಟುಮಾಡಿತು" ಎಂದು ಈ ವಿಪತ್ತೇ ಸೋವಿಯೆಟ್ ಸೈನ್ಯ ಅಫಘಾನ್ ರಂಗದ ಮೇಲೆ ಬರಲು ಕಾರಣ ಎಂದು ಸ್ಪಷ್ಟವಾಗಿ ಹೇಳಿದೆ.

"ಅಫಘಾನಿಸ್ತಾನದೊಳಗೆ ಪ್ರತಿಕ್ರಾಂತಿಕಾರಿ ಗ್ಯಾಂಗ್‌ಗಳನ್ನು ನುಗ್ಗಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿದರೆ" ಮತ್ತು ಪ್ರತಿಕ್ರಾಂತಿಯ ಮಧ್ಯಪ್ರವೇಶದ ವಿರುದ್ಧ ನಂಬಲರ್ಹ ಗ್ಯಾರಂಟಿ ದೊರೆತರೆ ಸೋವಿಯೆಟ್ ಸೈನ್ಯದ ವಾಪಸಾತಿಗೆ ಸಿದ್ಧ ಎಂದು ಅವರು ಹೇಳಿದ್ದಾರೆ. "ನಾವು ಕ್ರಾಂತಿಯನ್ನು ರಫ್ತುಮಾಡುವುದನ್ನು ವಿರೋಧಿಸುತ್ತೇವೆ. ಅದೇ ಸಮಯದಲ್ಲಿ ಯಾವುದೇ ಪ್ರತಿಕ್ರಾಂತಿಯನ್ನು ರಫ್ತು ಮಾಡುವುದನ್ನು ಒಪ್ಪುವುದು ನಮಗೆ ಸಾಧ್ಯವಿಲ್ಲ" ಎಂಬ ದೃಢ ಮರು ಪ್ರತಿಪಾದನೆ ಹೊಸ ಭರವಸೆ ಮತ್ತು ಉಲ್ಲಾಸ ಕೊಡುವಂತದ್ದು.

ಅಲಿಪ್ತ ಚಳುವಳಿ

ಅಲಿಪ್ತ ಚಳುವಳಿಗೆ ಸಂಬಂಧಪಟ್ಟಂತೆ ವರದಿಯಲ್ಲಿನ ಹೇಳಿಕೆಯಲ್ಲಿ "ಈ ಚಳುವಳಿಯ ಶಕ್ತಿಯ ಮೂಲವಿರುವುದು ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿಯನ್ನು ಮತ್ತು ಯುದ್ಧ ಹಾಗೂ ಆಕ್ರಮಣವನ್ನು ವಿರೋಧಿಸುವ ಅದರ ಉದ್ದೇಶದಲ್ಲಿ" ಮತ್ತು "ಜಾಗತಿಕ ರಾಜಕಾರಣದಲ್ಲಿ ತನ್ನ ಪಾತ್ರವನ್ನು ಹೆಚ್ಚಿಸಿಕೊಳ್ಳಬೇಕಾದರೆ ಅದನ್ನು ನಾವು ಸ್ವಾಗತಿಸುತ್ತೇವೆ-ಅದು ತನ್ನ ಈ ಮೂಲಭೂತ ಸಿದ್ಧಾಂತಗಳಿಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕು" ಎನ್ನಲಾಗಿದೆ.

ಮುಂದುವರಿದು "ಈ ದೇಶಗಳಲ್ಲಿ ಬಹಳ ವೈವಿಧ್ಯತೆಯಿದೆ. ವಿಮೋಚನೆಯ ನಂತರ ಅವುಗಳಲ್ಲಿ ಕೆಲವು ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಹಾದಿ ಹಿಡಿದಿವೆ. ಇನ್ನು ಕೆಲವು ದೇಶಗಳಲ್ಲಿ ಬಂಡವಾಳಶಾಹೀ ಸಂಬಂಧಗಳು ಬೇರುಬಿಟ್ಟಿವೆ. ಕೆಲವು ದೇಶಗಳು ನಿಜವಾಗಿಯೂ ಸ್ವತಂತ್ರ ಧೋರಣೆ ಅನುಸರಿಸುತ್ತಿದ್ದರೆ ಇನ್ನು ಕೆಲವು ದೇಶಗಳು ಸಾಮ್ರಾಜ್ಯಶಾಹೀ ಧೋರಣೆಗಳಿಗನುಗುಣವಾಗಿ ನಡೆಯುತ್ತಿವೆ. ಒಟ್ಟಿನಲ್ಲಿ, ಚಿತ್ರ ಅಸಮಂಜಸ ಮಿಶ್ರಣದಂತಿದೆ"-ಎನ್ನುತ್ತದೆ ವರದಿ.

ಮೇಲಿನ ಎರಡು ಪರಿಶೀಲನೆಗಳ ಬಗ್ಗೆ ಹೇಳುವುದಾದರೆ ಇವು ತೀರಾ ಸಾಮಾನ್ಯೀಕೃತ ಪರಿಶೀಲನೆಗಳು. CPSUನ ಕೇಂದ್ರ ಸಮಿತಿಯಂತಹ ಸಂಸ್ಥೆಯ ವರದಿಯಿಂದ ಇದಕ್ಕಿಂತಲೂ ಹೆಚ್ಚು ಮೂರ್ತವಾದ ಹಾಗೂ ವಸ್ತುನಿಷ್ಠ ಸಾಮಾನ್ಯೀಕರಣವನ್ನು ನಿರೀಕ್ಷಿಸಲಾಗುತ್ತದೆ. ಅಲಿಪ್ತ ಚಳವಳಿ ಇಪ್ಪತ್ತು ವರ್ಷಗಳನ್ನು ಪೂರ್ಣಗೊಳಿಸಿದೆ ಹಾಗೂ ಇತ್ತೀಚೆಗೆ ತನ್ನ 20ನೇ ವಾರ್ಷಿಕೋತ್ಸವವನ್ನು ಆಚರಿಸಿದೆ ಎಂದು ತಿಳಿದೇ ಇದೆ. ಅದೇ ಇಪ್ಪತ್ತು ವರ್ಷಗಳ ಹಿಂದೆ ಜಾಗತಿಕ ಕಮ್ಯುನಿಸ್ಟ್ ಚಳವಳಿ ಬಂಡವಾಳಶಾಹಿಯಲ್ಲದ ಅಭಿವೃದ್ಧಿಮಾರ್ಗ ಹಾಗೂ ರಾಷ್ಟ್ರೀಯ ಪ್ರಜಾಪ್ರಭುತ್ವದ ಪರಿಕಲ್ಪನೆಗಳನ್ನು ಮುಂದೆ ಮಾಡಿತ್ತು ಎಂಬುದೂ ಕುತೂಹಲದ ಸಂಗತಿ. CPSUನ ವರದಿ ಅಲಿಪ್ತ ಚಳವಳಿ ಹಾಗೂ ಬಂಡವಾಳಶಾಹಿಯಲ್ಲದ ಅಭಿವೃದ್ಧಿ ಮಾರ್ಗ ಮತ್ತು ಸಮಾಜವಾದೀ ಉನ್ಮುಖತೆ ಬಗ್ಗೆ ಪರಿಶೀಲಿಸಬೇಕಾಗಿತ್ತು.

"ಚಿತ್ರ ಅಸಮಂಜಸ ಮಿಶ್ರಣದಂತಿದೆ" ಮತ್ತು "ಅವುಗಳಲ್ಲಿ ಕೆಲವು ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಹಾದಿ ಹಿಡಿದಿವೆ" ಮತ್ತು "ಇನ್ನು ಕೆಲವು ದೇಶಗಳಲ್ಲಿ ಬಂಡವಾಳಶಾಹೀ ಸಂಬಂಧಗಳು ಬೇರು ಬಿಟ್ಟಿದೆ" ಹಾಗೂ ಈ ತೆರದ ಬಂಡವಾಳಶಾಹಿ ಕಡೆಗೆ ಮುಖ ಮಾಡಿದ ದೇಶಗಳಲ್ಲಿ "ಕೆಲವು ನಿಜವಾಗಿಯೂ ಸ್ವತಂತ್ರ ಧೋರಣೆಗಳಿಗನುಗುಣವಾಗಿ ನಡೆಯುತ್ತಿದೆ" ಎಂದಷ್ಟೇ ಹೇಳುವುದು ಕಳೆದ ಇಪ್ಪತ್ತು ವರ್ಷಗಳಲ್ಲಿ ಅಲಿಪ್ತ ಚಳವಳಿ ಮತ್ತು ಹೊಸದಾಗಿ ವಿಮೋಚನೆಗೊಂಡ ದೇಶಗಳು ಸಮಾಜವಾದೀ ಉನ್ಮುಖತೆ ಪಡೆಯುವುದರ ಸಾಧ್ಯತೆ ಮತ್ತು ವಾಸ್ತವತೆಗಳು ಇವೆರಡರ ಬಗ್ಗೆಯೂ ಮೂರ್ತ ಹಾಗೂ ವಸ್ತುನಿಷ್ಠ ಮಾರ್ಕ್ಸ್‌ವಾದೀ ಪರಿಶೀಲನೆಯಿಂದ ತಪ್ಪಿಸಿಕೊಂಡತೆಯೇ ಸರಿ. ಅಲಿಪ್ತ ರಾಷ್ಟ್ರಗಳ ಸಮುದಾಯದಲ್ಲಿ ಯಾವುದೇ ದೇಶದ ಭಾವಸೂಕ್ಷ್ಮಗಳಿಗೆ ಭಂಗ ತರದಂತೆ ಈ ರೀತಿಯ ಪರಿಶೀಲನೆ ನಡೆಸುವುದು ಸಾಧ್ಯವಿತ್ತು.

[ಮುಂದುವರೆಯುವುದು]

ಕರಾಳ ಶಾಸನದ ವಿರುದ್ಧ ಸಿ. ಪಿ. ಐ. (ಎಂ) ಪ್ರತಿಭಟನೆ

ಕರ್ನಾಟಕ ಸರ್ಕಾರ ಎನ್. ಎಸ್. ಎ. ಕರಾಳ ಶಾಸನದ ಮೊದಲ ಪ್ರಹಾರವನ್ನು ಕೊಡಗಿನ ಮುಗ್ಧ ಜನರ ಮೇಲೆ ಮಾಡಲಾಗಿದೆ. ಎನ್.ಎಸ್.ಎ. ಉಪಯೋಗಿಸುವ ಅಧಿಕಾರವನ್ನು ಕೊಡಗಿನ ಜಿಲ್ಲಾಧಿಕಾರಿಗೆ ಕೊಡಲಾಗಿದೆ.

ಈ ಜನತಂತ್ರ ವಿರೋಧಿ ಕ್ರಮವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೊಡಗು ಜಿಲ್ಲಾ ಸಮನ್ವಯ ಸಮಿತಿಯು ಉಗ್ರವಾಗಿ ಖಂಡಿಸಿದೆ.

ಕೊಡಗು ಜಿಲ್ಲೆಯಲ್ಲಿ ಯಾವುದೇ ಗಲಭೆಯಾಗಲೀ, ರಾಷ್ಟ್ರವಿರೋಧಿ ಚಟುವಟಿಕೆಯಾಗಲೀ, ಪ್ರಕ್ಷುಬ್ಧ ವಾತಾವರಣವಾಗಲೀ, ದೊಡ್ಡ ಪ್ರಮಾಣದ ಕಾರ್ಮಿಕ ಅಶಾಂತಿಯಾಗಲೀ ಇಲ್ಲ. ಈ ಶಾಸನ ಜಾರಿಮಾಡಲಿಕ್ಕೆ ಯಾವ ಕಾರಣವನ್ನೂ ಸರಕಾರ ಸೂಚಿಸಿಲ್ಲ.

ಇಲ್ಲಿಯ ಅಕ್ರಮ ಮರವ್ಯಾಪಾರ ಸಾಗಾಣಿಕೆ, ಕಳ್ಳಸಾಗಾಣಿಕೆ ನಡೆಸುವುದು ಮೊದಲಾದ ಘನಕೃತ್ಯಗಳಿಗೆ ಮುಖ್ಯ ಇಲಾಖೆಗಳಲ್ಲಿರುವ ಕೆಲವು ಅಧಿಕಾರಿಗಳು ಮತ್ತು ಕಾಂಗ್ರೆಸ್ ನೇತಾಗಳೇ ಕಾರಣರಾಗಿದ್ದಾರೆ. ಆದರೂ ಈ ಕಳ್ಳಸಾಗಾಣಿಕೆದಾರರನ್ನು, ಕಾಳಸಂತೆಖೋರರನ್ನು, ಕಳ್ಳದಾಸ್ತಾನುಗಾರರನ್ನು ಸದೆಬಡೆಯಲು ಪ್ರಸ್ತುತ ಜಾರಿಯಲ್ಲಿರುವ ಕಾಯ್ದೆಗಳೇ ಸಾಕು. ಈ ಕಾಯ್ದೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಸಮಾಜದ್ರೋಹಿ ಕ್ರಮಗಳಿಗೆ ತಡೆಹಾಕಲು ಸಾಧ್ಯವಿದೆ. ಆದರೆ ಇದನ್ನು ಮಾಡಲು ಸರಕಾರಕ್ಕೆ ಎದೆಗಾರಿಕೆ ಇಲ್ಲ.

ಈ ಕರಾಳ ಶಾಸನದ ಮೂಲಕ ಜನತೆಯಲ್ಲಿ ಬೆಳೆಯುತ್ತಿರುವ ಅಸಂತೃಪ್ತಿಯನ್ನು ದಮನಗೊಳಿಸಲು, ಟ್ರೇಡ್‌ಯೂನಿಯನ್ ಚಳುವಳಿ, ರೈತರ ಮತ್ತು ಕಾರ್ಮಿಕರ ನ್ಯಾಯಯುತ ಚಳುವಳಿ, ಹೋರಾಟಗಳನ್ನು ಸದೆಬಡೆಯಲು ಈ ಶಾಸನ ಬಳಸಿಕೊಳ್ಳುವ ಶಂಕೆಯುಂಟಾಗಿದೆ.

ಈ ಮಸೂದೆಯನ್ನು ಸರಕಾರ ಹಿಂತೆಗೆದುಕೊಳ್ಳದಿದ್ದರೆ ಇದರ ವಿರುದ್ಧ, ಪ್ರಜಾಪ್ರಭುತ್ವ ಮೌಲ್ಯಗಳ ಮತ್ತು ಹಕ್ಕುಗಳ ರಕ್ಷಣೆಗಾಗಿ ಹೋರಾಟವನ್ನು ಕೈಗೊಳ್ಳಲಾಗುವುದೆಂದು ಪಕ್ಷ ಎಚ್ಚರಿಸಿದೆ.

ಕಾರಣ ಎಲ್ಲ ಪ್ರಜಾಪ್ರಭುತ್ವ ಜನತೆ, ಪಕ್ಷಗಳು, ಸಂಘಟನೆಗಳು ಮುಂದೆಬರಬೇಕೆಂದು ಪಕ್ಷ ಕರೆ ನೀಡಿದೆ.

ಏಪ್ರಿಲ್ ೨೦ ಧರಣಿಗೆ ಬೆಂಬಲ :

ಏಪ್ರಿಲ್ 20ರಂದು ಜನತಂತ್ರ ರಂಗದ ರೈತಕಾರ್ಮಿಕ ಹೋರಾಟದ ಸಮಿತಿಯ ಪರವಾಗಿ ಜಿಲ್ಲಾಕೇಂದ್ರಗಳಲ್ಲಿ ನಡೆಯಲಿರುವ ಧರಣಿ ಸತ್ಯಾಗ್ರಹ ಕಾರ್ಯಕ್ರಮಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೊಡಗು ಜಿಲ್ಲಾ ಸಮನ್ವಯ ಸಮಿತಿ ಬೆಂಬಲವನ್ನು ನೀಡಿದೆ.

ಪಶ್ಚಿಮ ಬಂಗಾಳ ಭಾಷಾ ಧೋರಣೆಯ ವಿರುದ್ಧ

ರಾಜಕೀಯ ದುರುದ್ದೇಶದ ಚಳುವಳಿ

(ಹಿಂದಿನ ಸಂಚಿಕೆಯಿಂದ)

ಫೆಬ್ರುವರಿ 24ರಂದು ತಮ್ಮ ಸರ್ಕಾರದ ಶಿಕ್ಷಣನೀತಿಯ ವಿರುದ್ಧ ನಡೆಯುತ್ತಿರುವ ದುರುದ್ದೇಶಪೂರಿತ ಪ್ರಚಾರವನ್ನು ವಿರೋಧಿಸುತ್ತಾ ಅವರು ಕೆಳಹಂತದಲ್ಲಿ ಇಂಗ್ಲೀಷಿನ ರದ್ಧತಿಯಿಂದ ಎರಡನೇ ದರ್ಜೆಯ ನಾಗರಿಕರು ನಿರ್ಮಾಣಗೊಳ್ಳುತ್ತಾರೆಂಬ ತಮ್ಮ ಸರಕಾರದ ಟೀಕಾಕಾರರಿಗೆ ಸಂಶಯವಿದೆಯೆಂದರು. ಪ್ರಥಮ ದರ್ಜೆ ನಾಗರಿಕರೆಂದರೆ ಮೊದಲನೇ ತರಗತಿಯಿಂದ ಇಂಗ್ಲೀಷ್ ಕಲಿತವರು ಮಾತ್ರ ಎಂಬ ಇಂತಹ ಟೀಕಾಕಾರರ ಅಭಿಪ್ರಾಯವನ್ನು ಬಸುರವರು ಅಸಂಬದ್ಧ ಎಂದು ತಳ್ಳಿಹಾಕಿದ್ದಾರೆ. ಚೀನಾ ಹಾಗೂ ಸೋವಿಯೆಟ್ ಯೂನಿಯನ್‌ನಲ್ಲಿ ಇಂಗ್ಲೀಷನ್ನು ಪ್ರಾಥಮಿಕ ಶಾಲೆಗಳಲ್ಲಿ ಬೋಧಿಸಲಾಗುತ್ತಿದೆಯೆಂಬ ರಾಜ್ಯದ ಮಾಜೀ ಮುಖ್ಯ ನ್ಯಾಯಾಧೀಶರ ಹೇಳಿಕೆ ವಾಸ್ತವಾಂಶಕ್ಕೆ ವಿರೋಧಿಯಾಗಿದೆಯೆಂದೂ ಅವರು ಹೇಳಿದರು.

ಮುಖ್ಯಮಂತ್ರಿಗಳು ಪಶ್ಚಿಮ ಬಂಗಾಳದ ಎಡರಂಗದ ಆಡಳಿತದಲ್ಲಿ ರಾಜಕೀಯ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಪ್ರವೇಶಿಸುತ್ತಿದೆ ಎಂಬ ಪ್ರಧಾನಮಂತ್ರಿ ಇಂದಿರಾಗಾಂಧಿಯವರ ಆಪಾದನೆಯನ್ನು ಸ್ಪಷ್ಟವಾಗಿ ನಿರಾಕರಿಸಿದರು. ಫೆಬ್ರುವರಿ 21ರಂದು ಶಹೀದ್ ಮಿನಾರ್‌ನಲ್ಲಿ ಒಂದು ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಅವರು "ಎಲ್ಲಾ ಶಿಕ್ಷಣ ಸಂಸ್ಥೆಗಳ ಆವರಣಗಳಲ್ಲಿ ಮತ್ತೆ ಸುವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ, ಸಾಮೂಹಿಕ ಕಾಪಿ ಹೊಡೆಯುವುದನ್ನು ತಡೆಯಲಾಗಿದೆ, ಪರೀಕ್ಷೆಗಳು ಈಗ ಸಮಯಕ್ಕೆ ಸರಿಯಾಗಿ ನಡೆಯುತ್ತಿವೆ, ಫಲಿತಾಂಶಗಳನ್ನು ಸಾಧ್ಯವಾದಷ್ಟು ಬೇಗನೇ ಪ್ರಕಟಿಸಲಾಗುತ್ತಿದೆ. ಇವೆಲ್ಲವನ್ನೂ ಮೀರಿದಂತೆ ಹನ್ನೆರಡನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪುಕ್ಕಟೆಯಾಗಿ ಕೊಡಲಾಗುತ್ತಿದೆ" ಎಂದು ಪ್ರತಿಪಾದಿಸಿದರು.

ಶಿಕ್ಷಣನೀತಿ ಹಾಗೂ ಭಾಷಾ ನೀತಿಯನ್ನು ರೂಪಿಸುವ ಮೊದಲು ಎಲ್ಲಾ ಬಗೆಯ ಅಭಿಪ್ರಾಯಗಳನ್ನು ಕೇಳಲಾಗಿದೆ ಎಂದು ಸೂಚಿಸಿದ ಅವರು ರಾಜ್ಯಸರ್ಕಾರದ ಶಿಕ್ಷಣ ಧೋರಣೆ ಎಡರಂಗದ 36 ಅಂಶದ ಕಾರ್ಯಕ್ರಮದಲ್ಲಿರುವ ಪ್ರತಿಜ್ಞೆಗಳಿಗನುಗುಣವಾಗಿದೆ ಎಂದರು.

ಕೆಲವು ಹಿಡಿಯಷ್ಟು ಬುದ್ಧಿಜೀವಿಗಳೆಂದೆನಿಸಿಕೊಂಡವರು ಹಾಗೂ ಅವರ ರಾಜಕೀಯ ದುರುದ್ದೇಶದಿಂದ ಕೂಡಿದ ಹಸ್ತಕರು ಏಕಸ್ವಾಮ್ಯ ಪತ್ರಿಕೆಗಳ ಕ್ಯಾಮರಾ ಲೆನ್ಸ್‌ಗಳೆದುರು ಅಣಕು ಸತ್ಯಾಗ್ರಹ ಹಾಗೂ ನಾಗರಿಕ ಅಸಹಕಾರ ನಡೆಸುವುದರಲ್ಲಿ ತಲ್ಲೀನರಾಗಿರುವಾಗ ಶಿಕ್ಷಕರು, ವಿದ್ಯಾರ್ಥಿಗಳು ಯುವಕರು ಇತ್ಯಾದಿಗಳವರ ಸಾಮೂಹಿಕ ಸಂಘಟನೆಗಳು ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ, ಕೇರಿಗಳಲ್ಲಿ, ಗ್ರಾಮಾಂತರ ಹಾಗೂ ನಗರಕ್ಷೇತ್ರಗಳಲ್ಲಿ ನೂರಾರು ಸಭೆ, ಸಮಾವೇಶಗಳನ್ನು ನಡೆಸಿ ಎಡರಂಗ ಸರ್ಕಾರದ ಶೈಕ್ಷಣಿಕ ಧೋರಣೆಗಳನ್ನು ಜನಪ್ರಿಯಗೊಳಿಸುವುದರಲ್ಲಿ ಮಗ್ನರಾಗಿದ್ದಾರೆ.

ಬುದ್ಧಿಜೀವಿಗಳಲ್ಲಿ ಬಹುಸಂಖ್ಯಾತರು ಪಶ್ಚಿಮ ಬಂಗಾಳದ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಪರ ಸಂಪ್ರದಾಯಕ್ಕೆ ಬದ್ಧರಾಗಿದ್ದಾರೆಂದು ಇತ್ತೀಚೆಗೆ ಫೆಬ್ರುವರಿ 4ರಂದು ಎಸ್ಪ್ಲಾನೇಡ್ ಈಸ್ಟ್‌ನಲ್ಲಿ ನಡೆದ ಬೃಹತ್ ರ್ಯಾಲಿ ಪ್ರದರ್ಶಿಸಿದೆ. ಲೇಖಕರು, ಸಾಹಿತ್ಯಕಾರರು, ಕಲಾವಿದರು, ಶಿಕ್ಷಕರು ಹಾಗೂ ಬುದ್ಧಿಜೀವಿಗಳು ಶಿಕ್ಷಣ ಹಾಗೂ ಇತರ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾದೇಶಿಕ ಭಾಷೆಗಳನ್ನು ಉಪಯೋಗಿಸಬೇಕು ಎಂದು ಕೇಳಲು ಮತ್ತು ಪ್ರಾಥಮಿಕ ಹಂತದಲ್ಲಿ ಇಂಗ್ಲೀಷ್ ಕಡ್ಡಾಯ ಭಾಷೆಯಾಗಿರುವುದನ್ನು ರದ್ದುಪಡಿಸುವ ನಿರ್ಧಾರವನ್ನು ಬೆಂಬಲಿಸಲು ಈ ರ್ಯಾಲಿಯನ್ನು ನಡೆಸಿದ್ದರು. ಈ ರ್ಯಾಲಿಯ ಭಾಷಣಕಾರರಲ್ಲಿ ಟಾಗೋರ್ ಸಾಹಿತ್ಯದ ಪ್ರಖ್ಯಾತ ಪಂಡಿತರೂ, ಟಾಗೋರ್ ಪ್ರಶಸ್ತಿ ವಿಜೇತರೂ ಆದ ನೇಪಾಲ್ ಮಜುಮ್‌ದಾರ್, ಪ್ರಖ್ಯಾತ ನಾಟಕಕಾರ ಮನ್ಮಥರಾಯ್, ನಂದಗೋಪಾಲ್ ಸೇನ್‌ಗುಪ್ತಾ, ವಿವೇಕಾನಂದ ಮುಖ್ಯೋಪಾಧ್ಯಾಯ, ನಾರಾಯಣ ಚೌಧರಿ ಮುಂತಾದ ಸಾಹಿತ್ಯಕಾರರು ಹಾಗೂ ಪತ್ರಕರ್ತರು.ಕವಿ ಮುನೀಂದ್ರ ರಾಯ್, ಶಿಕ್ಷಣತಜ್ಞರು ಪಶ್ಚಿಮ ಬಂಗಾಳ ಮಾಧ್ಯಮಿಕ ಶಿಕ್ಷಣ ಬೋರ್ಡ್‌ನ ಅಧ್ಯಕ್ಷರಾದ ಬಬೇಶ್ ಮೈತ್ರ, ಕಲಕತ್ತಾ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ರಮೇಂದ್ರ ಕುಮಾರ್ ಪೋದ್ದಾರ್, ನಾಟಕಕಾರ ಹಾಗೂ ನಿರ್ದೇಶಕ ಉತ್ಪಲ್‌ದತ್ತ ಹಾಗೂ ಮಕ್ಕಳ ಸಾಹಿತ್ಯದ ವಿಖ್ಯಾತ ಬರಹಗಾರ ಹರೇನ್ ಘಟಕ್ ಇತ್ಯಾದಿಯವರು ಸೇರಿದ್ದರು.

ಟಾಗೋರರ ಜೀವನ ಚರಿತ್ರೆಕಾರರೂ, ಟಾಗೋರ್ ಸಾಹಿತ್ಯದ ಬಗ್ಗೆ ಅಧಿಕಾರವಾಣಿಯಿಂದ ಮಾತಾಡಬಲ್ಲವರೂ ಆದ ಪ್ರಭಾತ್ ಮುಖ್ಯೋಪಾಧ್ಯಾಯ ಹಾಗೂ ಟಾಗೋರ್ ಸಾಹಿತ್ಯದ ಇನ್ನೊಬ್ಬ ಸುಪರಿಚಿತ ಪಂಡಿತರಾದ ಪ್ರಭೋದ್ ಸೇನ್ ಇವರೂ ಎಡರಂಗ ಸರ್ಕಾರದ ಪ್ರಾಥಮಿಕ ಶಿಕ್ಷಣ ನೀತಿಯನ್ನು ಬೆಂಬಲಿಸಿದ್ದಾರೆ. ರಾಜ್ಯಸರ್ಕಾರಕ್ಕೆ ಪ್ರತ್ಯೇಕವಾಗಿ ಬರೆದ ಪತ್ರಗಳಲ್ಲಿ ಇವರಿಬ್ಬರೂ ಈ ವಿಷಯದಲ್ಲಿ ತಮ್ಮ ಸಹಕಾರ ನೀಡುವುದಾಗಿ ಹೇಳಿದ್ದಾರೆ.

ಜವಾಹರಲಾಲ್ ವಿಶ್ವವಿದ್ಯಾನಿಲಯ ಹಾಗೂ ದಿಲ್ಲೀ ವಿಶ್ವವಿದ್ಯಾನಿಲಯದ ಇಪ್ಪತ್ತು ಮಂದಿ ಶಿಕ್ಷಕರು ರುಜುಮಾಡಿರುವ ಈ ಕೆಳಗಿನ ಹೇಳಿಕೆಯನ್ನು ಮಾರ್ಚ್ 11, 1981 ರಂದು ನವದೆಹಲಿಯಲ್ಲಿ ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಯಿತು :

ಸುಬ್ರತ ಪಾಲ್

ಬಹಳ ಹಿಂದೇನೇ ಕೈಗೊಳ್ಳಬೇಕಾಗಿದ್ದು ಈಗ ಪಶ್ಚಿಮ ಬಂಗಾಳ ಸರಕಾರ ಜಾರಿಗೊಳಿಸಬೇಕೆಂದು ಬಯಸಿರುವ ಕ್ರಮವನ್ನು ಕೆಲವು ವಿಖ್ಯಾತ ವ್ಯಕ್ತಿಗಳು ವಿರೋಧಿಸಬೇಕೆಂದಿರುವುದು ನಮಗೆ ಆಶ್ಚರ್ಯವನ್ನುಂಟುಮಾಡಿದೆ. ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಮಗುವಿಗೆ ಅದರ ಮಾತೃಭಾಷೆಯನ್ನು ಮಾತ್ರ ಬೋಧಿಸಬೇಕು ಮತ್ತು ಒಂದು ವಿದೇಶೀ ಭಾಷೆಯ ಕಲಿಕೆಯ ಹೊರೆಯನ್ನು ಅದರ ಮೇಲೆ ಹೇರಬಾರದು ಎಂಬ ಯುಕ್ತಿಯುಕ್ತವಾದ ವೈಜ್ಞಾನಿಕ ತತ್ವವನ್ನು ಪಶ್ಚಿಮ ಬಂಗಾಳ ಸರ್ಕಾರದ ಈ ಕ್ರಮ ಪ್ರತಿಪಾದಿಸುತ್ತದೆ. ಯಾವುದೇ ಭಾಷೆಯನ್ನು ಸರಿಯಾಗಿ ಕಲಿಯಬೇಕಾದರೆ ಅದಕ್ಕೆ ತಕ್ಕದಾಗಿ ಸಂಪರ್ಕ ಏರ್ಪಡಬಹುದಾದ ಒಂದು ವಾತಾವರಣವಿರಬೇಕು. ವಿಶೇಷವಾಗಿ ವ್ಯಕ್ತಿತ್ವ ರೂಪಿತವಾಗುವ ಆರಂಭದ ಹಂತಗಳಲ್ಲಿ ಇದು ಅತ್ಯಗತ್ಯ. ಇದೇ ಈ ತತ್ವದ ಹಿನ್ನೆಲೆಯಲ್ಲಿನ ತರ್ಕ. ಪ್ರಾಥಮಿಕ ಹಂತದಲ್ಲಿ ಇಂಗ್ಲೀಷನ್ನು ಸೇರಿಸುವುದೆಂದರೆ ಅಸಂಖ್ಯಾತ ಗ್ರಾಮಾಂತರ ಮಕ್ಕಳ ಮೇಲೆ ಅಗಾಧ ಹೊರೆಹೇರಿದಂತೆ. ಇದನ್ನು ಯಾವ ಶಿಕ್ಷಣಶಾಸ್ತ್ರೀಯ ಆಧಾರದ ಮೇಲೂ ಸಮರ್ಥಿಸಲು ಸಾಧ್ಯವಿಲ್ಲ. ಏಕೆಂದರೆ ಆ ಮಕ್ಕಳಿಗೆ ಸರಿಯಾದ ಇಂಗ್ಲೀಷ್ ಭಾಷೆಯ ವಾತಾವರಣವನ್ನು ಒದಗಿಸುವುದು ಸಾಧ್ಯವಿಲ್ಲ. ಇಂಗ್ಲೀಷ್ ಬೋಧನೆಯನ್ನು ಐದನೇ ತರಗತಿಯ ನಂತರವೇ ಆರಂಭಿಸಬೇಕೆಂದು ಶಿಫಾರಸುಮಾಡುವಾಗ ಕೊಠಾರೀ ಆಯೋಗ ಈ ವಾಸ್ತವಾಂಶವನ್ನು ಒಪ್ಪಿಕೊಂಡಿತ್ತು. ಈ ಶಿಫಾರಸಿಗನುಗುಣವಾಗಿ ಭಾರತದ 22ರಲ್ಲಿ 15 ರಾಜ್ಯಗಳು ಈಗಾಗಲೇ ಕ್ರಮ ಕೈಗೊಂಡಿವೆ. ಮೂರನೇ ತರಗತಿಯಿಂದ ಇಂಗ್ಲೀಷ್ ಬೋಧಿಸುವ ಕೆಲವೇ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳವೂ ಒಂದಾಗಿತ್ತು. ಆದ್ದರಿಂದ ಸರಕಾರದ ಹೊಸಕ್ರಮ ಒಂದು ಸ್ವಾಗತಾರ್ಹ ಹೊಸ ಹೆಜ್ಜೆ.

ಇದು ಜನಸಾಮಾನ್ಯರ ಹಿತಾಸಕ್ತಿಗನುಗುಣವಾದ ಕ್ರಮ. ಹನ್ನೆರಡನೇ ತರಗತಿಯವರೆಗೆ ಶಿಕ್ಷಣವನ್ನು ಉಚಿತವಾಗಿ ನೀಡಬೇಕೆನ್ನುವ ಪಶ್ಚಿಮ ಬಂಗಾಳ ಸರ್ಕಾರದ ಈ ಹಿಂದಿನ ನಿರ್ಧಾರದಂತೆ ಪ್ರಾಥಮಿಕ ಶಿಕ್ಷಣದ ಹೊಸ ಪಠ್ಯಕ್ರಮ ಗ್ರಾಮಾಂತರ ಜನತೆಯ ಶೈಕ್ಷಣಿಕಮಟ್ಟವನ್ನು ಸುಧಾರಿಸುತ್ತದೆ. ಅಗತ್ಯವಾದಕ್ಕಿಂತ ಮೊದಲೇ ಇಂಗ್ಲೀಷ್ ಬೋಧನೆಗೊಳಗಾಗಬೇಕಾದ ಅನಗತ್ಯ ತಪ್ಪಿಸಬಹುದಾದ ಹೊರೆಯನ್ನು ಅವರಿನ್ನು ಹೊರಬೇಕಾಗಿಲ್ಲ. ಶಿಕ್ಷಣದಬಗ್ಗೆ ಮೇಲ್ವರ್ಗದ, ನಗರದ ದೃಷ್ಟಿ ಪಶ್ಚಿಮಬಂಗಾಳದಲ್ಲಿ ಶ್ರೀಮಂತ ಮತ್ತು ಬಡವರ ಶಿಕ್ಷಣಮಟ್ಟದಲ್ಲಿನ ನಡುವಿನ ಅಂತರವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಬಂಗಾಲೀ ಭಾಷೆಯಲ್ಲಿ ಆಧಾರಭೂತ ಹಾಗೂ ಸಾಕಷ್ಟು ಸಾಮರ್ಥ್ಯ ಪಡೆದರೆ ಅದು ಇಂಗ್ಲೀಷ್ ಕಲಿಯಲು ಹೆಚ್ಚು ಸಾಧಕವಾಗುತ್ತದೆಯೇ ಹೊರತು ಕಮ್ಮಿಯಲ್ಲ.

ಈ ಹೇಳಿಕೆಗೆ ಸಹಿಹಾಕಿದವರು ತಪಸ್ ಮಜುಮ್‌ದಾರ್, ಲೋತಿಕಾ ಸರ್ಕಾರ್, ನಾಮವರ್ ಸಿಂಗ್, ಮೂನಿಸ್ ರಜಾ, ಕೆ.ಪಿ. ಕರುಣಾಕರನ್, ಕೃಷ್ಣಾಭಾರದ್ವಾಜ್, ಲಿಮಿತ್ ಬಾಧುರಿ, ಸುನಂದಾ ಸೇನ್, ಜಫರ್ ಇಮಾಮ್, ಉತ್ಸಾ ಪಟ್ನಾಯಕ್, ಸಿ.ಪಿ.ಭಾಂಬ್ರಿ, ಹರಬಂಸ್‌ಮುಖಿಯಾ, ರೇಖಾಕಾಮಂತ್, ಕಿಟ್ಟಿಮೆನನ್,ಮಧು ಪ್ರಸಾದ್ ಹಾಗೂ ಪ್ರಭಾತ್ ಪಟ್ನಾಯಕ್.

ಪತ್ರಿಕೆಗಳಿಗೆ ಬಿಡುಗಡೆ ಮಾಡಿದವರು :

ಪ್ರಭಾತ್ ಪಟ್ನಾಯಕ್
ಅರ್ಥಿಕ ಅಧ್ಯಯನ ಕೇಂದ್ರ
ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯ, ನವದೆಹಲಿ.

[ಮುಗಿಯಿತು]

ರೈತ-ಕಾರ್ಮಿಕ ಹೋರಾಟ ಸಮಿತಿ ಸಭೆ

ಕರ್ನಾಟಕ ಪ್ರಗತಿಪರ ಜನತಂತ್ರ ರಂಗದ ರೈತ-ಕಾರ್ಮಿಕರ ಹೋರಾಟ ಸಮಿತಿಯ ಸಭೆ ತಾ. 28-3-81ರಂದು ನಡೆದು ಕೆಳಕಂಡ ತೀರ್ಮಾನಗಳನ್ನು ಕೈಗೊಂಡಿತು :-

ಕಾಂಗ್ರೆಸ್ (ಯು) ಕಚೇರಿಯ ಮೇಲೆ ಹಲ್ಲೆ :

ದಿನಾಂಕ 17-3-81ರಂದು ನಗರದ ಕಾಂಗ್ರೆಸ್ (ಯು) ಕಚೇರಿಯ ಮೇಲೆ ಕಾಂಗ್ರೆಸ್ (ಐ) ಗೂಂಡಾಗಳು ನಡೆಸಿದ ಹಲ್ಲೆಯನ್ನು ಕರ್ನಾಟಕ ಪ್ರಗತಿಪರ ಜನತಂತ್ರ ರಂಗದ ರೈತ-ಕಾರ್ಮಿಕ ಹೋರಾಟ ಸಮಿತಿ ಅತ್ಯಂತ ಕಳವಳದಿಂದ ಚರ್ಚಿಸಿತು. ಇದು ಪೋಲೀಸರೊಂದಿಗೆ ಸಾಮೀಲಾಗಿ ನಡೆಸಿರುವ ಪೂರ್ವಯೋಜಿತ ರಾಜಕೀಯ ಸೇಡಿನ ದುಶ್ಕೃತ್ಯ ಎಂದು ಉಗ್ರವಾಗಿ ಖಂಡಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ (ಯು) ಕಚೇರಿಯಲ್ಲೇ ಸಿ.ಪಿ.ಐ., ಕಾಂಗ್ರೆಸ್ (ಯು), ಸಿ.ಪಿ.ಐ.(ಎಂ) ಮತ್ತು ಲೋಕದಳಗಳನ್ನೊಳಗೊಂಡ ನಾಲ್ಕೂ ವಿರೋಧಿ ಪಕ್ಷಗಳು ಕೂಡಿ ಜನತಂತ್ರ ರಂಗ ರಚಿಸಿ ಇದರ ಕೇಂದ್ರ ಕಚೇರಿ ಕಾಂಗ್ರೆಸ್ ಕಚೇರಿಯಲ್ಲೇ ಕೆಲಸಮಾಡುತ್ತಿದ್ದದ್ದು ಜನತೆಗೆ ತಿಳಿದ ಸಂಗತಿ. ಅದರ ಆಶ್ರಯದಲ್ಲಿ ನಾಡಿನ ರೈತರನ್ನು ಕಿತ್ತುತಿನ್ನುತ್ತಿರುವ ತಂತರ್ಜ ಸಮಸ್ಯೆಗಳ ಕುರಿತು ಲಕ್ಷಾಂತರ ಜನರು ಭಾಗವಹಿಸಿದ ಚರಿತ್ರಾರ್ಹ ಜಾಥಾ ನಡೆಯಿತು. ನಂತರವೂ ರೈತರ ಸಮಸ್ಯೆಗಳನ್ನು ಪರಿಹರಿಸದ ಸರ್ಕಾರದ ರೈತ ವಿರೋಧಿ ನೀತಿಯ ವಿರುದ್ಧ ಮುಂದಿನ ಚಳುವಳಿಗಳಿಗೆ ರಂಗ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ.

ಸಾರ್ವಜನಿಕ ಉದ್ಯಮಗಳ ನೌಕರರು ಮುಷ್ಕರ ನಡೆಸುವಾಗ್ಗೆ ಅದನ್ನು ಬಗ್ಗುಬಡಿಯಲು ಸಭೆ ನಡೆಸುವುದಕ್ಕೂ ಚಿಕ್ಕಲಾಲ್‌ಬಾಗಿನಲ್ಲಿ ಸರ್ಕಾರ ಅಪ್ಪಣೆ ಕೊಡಲಿಲ್ಲ. ಇಂತಹ ಸನ್ನಿವೇಶದಲ್ಲಿ ಇದೇ ಕಾಂಗ್ರೆಸ್ (ಯು) ಕಚೇರಿಯಲ್ಲಿ ಸಭೆ ನಡೆಸಲು ಅವಕಾಶ ಕೊಡಲಾಯಿತು. ಒಟ್ಟಿನಲ್ಲಿ ಈ ಕಚೇರಿ ಇತ್ತೀಚಿನ ಕಾಲದಲ್ಲಿ ಜನತೆಯ ಚಳುವಳಿಗಳ ಕೇಂದ್ರವಾಗಿತ್ತು.

ಇವೆಲ್ಲವುಗಳಿಂದ ಕೋಪಗೊಂಡ ಸರ್ಕಾರ ಮತ್ತು ಅದರ ಆಳುವ ಪಕ್ಷದ ಗೂಂಡಾಗಳು ಪೋಲೀಸರೊಂದಿಗೆ ಸಂಚು ನಡೆಸಿ ಕಚೇರಿಯ ಮೇಲೆ ಹಲ್ಲೆ ನಡೆಸಿ ಅಲ್ಲಿ ಕಾಂಗ್ರೆಸ್ (ಯು) ಕಚೇರಿ ಕೆಲಸಮಾಡದಂತಹ ಪರಿಸ್ಥಿತಿಗೆ ಕಾರಣವಾಗಿದೆ.

ಕಾಂಗ್ರೈ ಗೂಂಡಾಗಳು ಇಂತಹ ಹೀನ ಕೃತ್ಯಗಳನ್ನು ನಡೆಸುತ್ತಿರುವುದು ಹೊಸದೇನೂ ಅಲ್ಲ. ನಗರದ ದಿನಪತ್ರಿಕೆಗಳ ಮೇಲೆ ದಾಳಿ, ಜೆ.ಎ.ಎಫ್. ಕಚೇರಿಯ ಮೇಲೆ ಹಲ್ಲೆ,

(7ನೇ ಪುಟ ನೋಡಿ)

ಸಿ·ಐ·ಟಿ·ಯು· ಪದಾಧಿಕಾರಿಗಳ ಸಭೆ

ಸಿ. ಐ. ಟಿ. ಯು. ಹರಿಹರದ ಸಮ್ಮೇಳನದಲ್ಲಿ ಚುನಾಯಿತರಾದ ಪದಾಧಿಕಾರಿಗಳ ಮೊದಲನೆ ಸಭೆಯು ದಿನಾಂಕ 3-4-81ರಂದು ಬೆಂಗಳೂರಿನಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಸ್. ಸೂರ್ಯನಾರಾಯಣರಾಯರು ವಹಿಸಿದ್ದರು.

ಪ್ರಾರಂಭದಲ್ಲಿ ಇತ್ತೀಚಿಗೆ ನಿಧನರಾದ ಕಾರ್ಮಿಕ ಬಂಧು ಕಾಂ. ನಾಗೇಶರಾಯರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಹರಿಹರದ ಸಮ್ಮೇಳನವು ಮಾಡಿದ ನಿರ್ಣಯಗಳನ್ನು ಕಾರ್ಯಗತ ಮಾಡುವ ಬಗ್ಗೆ ಚರ್ಚಿಸಿ. ಒಂದು ಲಕ್ಷರೂ. ನಿಧಿ ಸಂಗ್ರಹಕ್ಕೆ ವಿವಿಧ ಜಿಲ್ಲೆಗಳಿಗೆ ಕೋಟಾ ಹಾಕಲಾಯಿತು. ಸಿ.ಐ.ಟಿ.ಯು. ಕೇಂದ್ರ ಶಾಲೆಯನ್ನು ಮೇ 6ರಿಂದ 10ರವರೆಗೆ ಬೆಂಗಳೂರಿನಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಕನಿಷ್ಠ ಕೂಲಿ ಅನ್ವಯವಾಗುವ ಕೈಗಾರಿಕೆಗಳ ಕಾರ್ಮಿಕರ ದಕ್ಷಿಣ ಭಾರತದ ರಾಜ್ಯಗಳ ಜಂಟೀ ಸಮಾವೇಶವು ಮೇ ತಿಂಗಳಿನಲ್ಲಿ ಹೈದರಾಬಾದಿನಲ್ಲಿ ನಡೆಯಲಿದ್ದು ಇದಕ್ಕೆ ಪೂರ್ವಭಾವಿಯಾಗಿ ಕರ್ನಾಟಕ ರಾಜ್ಯ ಸಮಾವೇಶವು 26-4-81ರಂದು ಬೆಂಗಳೂರಿನಲ್ಲಿ ನಡೆಯುವದು. ಕನಿಷ್ಟ ಕೂಲಿ ಅನ್ವಯವಾಗುವ ಎಲ್ಲ ಕೈಗಾರಿಕೆಗಳ ಕಾರ್ಮಿಕರಿಗೂ ದಿವಸಕ್ಕೆ ರೂ. 12ರಂತೆ ಕನಿಷ್ಟ ಕೂಲಿಯನ್ನು ನಿಗದಿ ಮಾಡಬೇಕೆಂದು ಸರಕಾರವನ್ನು ಒತ್ತಾಯ ಮಾಡುವ ಬಗ್ಗೆ ಈ ಸಮಾವೇಶ ಚರ್ಚಿಸಿ; ಈ ಬೇಡಿಕೆಯು ಈಡೇರಿಕೆಗಾಗಿ ಮೇನಲ್ಲಿ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ಕರೆಕೊಡಲಿದೆ. ಈ ಸಮಾವೇಶವನ್ನು ಸಿ.ಐ.ಟಿ ಯು., ಎ.ಐ.ಟಿ.ಯು ಸಿ. ಮತ್ತು ಎಚ್.ಎಂ.ಎಸ್.ಗಳು ಜಂಟಿಯಾಗಿ ನಡೆಸಲಿವೆ. ಸಿ.ಐ.ಟಿ ಯು ಗೆ ಸೇರಿರುವ ಸಂಘಗಳಿಂದ ಸದರಿ ಕೈಗಾರಿಕೆಗಳ ಕಾರ್ಮಿಕರು ಹೆಚ್ಚಿನ ಸಂಖ್ಯೆಗಳಲ್ಲಿ ಪ್ರತಿನಿಧಿಗಳಾಗಿ ಬರುವಂತೆ ಪ್ರಯತ್ನಿಸಬೇಕೆಂದು ತೀರ್ಮಾನಿಸಲಾಯಿತು.

ಮೈಕೋನಲ್ಲಿ ಐ.ಎನ್.ಟಿ.ಯು.ಸಿ. ಗೂಂಡಾಗಿರಿಯನ್ನು ಸಭೆ ಉಗ್ರವಾಗಿ ಖಂಡಿಸಿತು. ಪ್ರಗತಿಪರ ಜನತಂತ್ರ ರಂಗದ ರೈತ ಕಾರ್ಮಿಕ ಹೋರಾಟ ಸಮಿತಿ ಆಶ್ರಯದಲ್ಲಿ 20-4-81 ರಂದು ಜಿಲ್ಲಾ ಕೇಂದ್ರಗಳಲ್ಲಿ ನಡೆಯುವ ಸತ್ಯಾಗ್ರಹ–ಪ್ರದರ್ಶನಗಳಿಗೆ ನಮ್ಮ ಕಾರ್ಮಿಕ ಸಂಘಗಳು ಬೆಂಬಲ ಕೊಡಬೇಕು ಎಂದೂ, ಈ ಸಲದ ಮೇ ದಿನಾಚರಣೆಯನ್ನು ಜಂಟಿಯಾಗಿ ನಡೆಸಬೇಕೆಂದೂ ತೀರ್ಮಾನಿಸಲಾಯಿತು.

ಜೀವವಿಮಾ ನೌಕರರು 2-4-81 ರಿಂದ ನಡೆಸುತ್ತಿರುವ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಬೇಕೆಂದು ನಿರ್ಣಯಿಸಲಾಯಿತು.

●

ರೈತ-ಕಾರ್ಮಿಕ ಹೋರಾಟ ಸಮಿತಿ ಸಭೆ

(6ನೇ ಪುಟದಿಂದ)

ಮೈಕೋ ನೌಕರರ ಸಂಘದ ಕಚೇರಿಯ ಆಕ್ರಮಣ ಇತ್ಯಾದಿಗಳು ದಿನನಿತ್ಯದ ಸುದ್ದಿಗಳಾಗಿವೆ. ಇವ್ಯಾವ ಪ್ರಕರಣಗಳಲ್ಲೂ ಪೋಲೀಸರು ಸೂಕ್ತ ಕ್ರಮ ಸಕಾಲದಲ್ಲಿ ಕೈಗೊಳ್ಳದೆ ಸಾಮೀಲಾಗಿದ್ದರು. ರಕ್ಷಣೆ ನೀಡಲು ಸಿದ್ಧರಿರಲಿಲ್ಲ. ಜೊತೆಗೆ ನಗರದಲ್ಲಿ ಖಲಂ 35ರ ಪೋಲೀಸ್ ಖಾಯ್ದೆಯ ನಿಷೇದಾಜ್ಞೆ ತಿಂಗಳುಗಟ್ಟಲೆಯಿಂದ ಹೊರಿಸಿ ಸಭೆ ಮೆರವಣಿಗೆಗಳಿಗೆ ಅಡ್ಡಿಮಾಡಿ ವಾಕ್ಸ್ವಾತಂತ್ರ ಹಾಗೂ ಸಂಘಟನಾ ಸ್ವಾತಂತ್ರ್ಯದ ಹರಣವಾಗಿದೆ.

ಸರ್ಕಾರ ಜನತೆಯ ಸಮಸ್ಯೆಗಳನ್ನು ಸಕಾರಾತ್ಮಕವಾಗಿ ಬಗೆಹರಿಸುವ ಬದಲು ಅವುಗಳನ್ನು ನಿರಾಕರಿಸಿ ಜನತೆಯ ಚಳುವಳಿಗಳನ್ನು ದಮನ ಮಾಡಲು ಅತ್ಯಂತ ನಾಚಿಗೆಗೆಟ್ಟ ರೀತಿಯಲ್ಲಿ ನಡೆದುಕೊಳ್ಳುತ್ತಿದೆ. ವಿರೋಧಿ ಪಕ್ಷಗಳ ಚಟುವಟಿಕೆಗಳನ್ನು ಮೊಟಕುಗೊಳಿಸಲು ಇಂತಹ ಹೀನ ಕೃತ್ಯಗಳಿಗೆ ಹೊಣೆಯಾಗಿದೆ. ನಾಗರಿಕರ ರಕ್ಷಣೆ ಮತ್ತು ವಾಕ್ಸ್ವಾತಂತ್ರ್ಯ, ಮತ್ತು ಸಂಘಟನಾ ಸ್ವಾತಂತ್ರ್ಯಗಳು ಸಂವಿಧಾನದಲ್ಲಿ ಸರ್ಕಾರ ರಕ್ಷಿಸಬೇಕಾದ ಕರ್ತವ್ಯ. ರಾಜ್ಯಸರ್ಕಾರ ಇವುಗಳನ್ನು ಹತ್ತಿಕ್ಕುವ ಕೆಲಸಮಾಡುತ್ತಿರುವುದು ಅತ್ಯಂತ ನಾಚಿಗೆಗೆಟ್ಟ ರಾಜಕೀಯ ಸೇಡಿನ ಕೃತ್ಯಗಳಾಗಿವೆ.

ಸರ್ಕಾರದ ಮತ್ತು ಆಳುವ ಪಕ್ಷದ ಈ ಅಕೃತ್ಯಗಳ ವಿರುದ್ಧ ಉಗ್ರವಾಗಿ ಪ್ರತಿಭಟಿಸಬೇಕೆಂದು ರಾಜ್ಯದ ಜನತೆಗೆ ಸಮಿತಿ ಕರೆ ನೀಡುತ್ತದೆ.

ಏಪ್ರಿಲ್ ೨೦ರ ಚಳುವಳಿಯ ಕುರಿತು :

ಈಗಾಗಲೇ ಸಮಿತಿ ಕರೆಯಿತ್ತಿರುವಂತೆ ರೈತರ ಕೇಳಿಕೆಗಳಿಗಾಗಿ ಏಪ್ರಿಲ್ 20ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿಗಳ ಮುಂದೆ ಧರಣಿ ಸತ್ಯಾಗ್ರಹ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಮಿತಿ ಕರೆ ನೀಡುತ್ತದೆ.

ಬಹಿರಂಗ ಸಭೆಗಳು :

ಇದಕ್ಕೆ ಪೂರ್ವಬಾವಿಯಾಗಿ ಸಾಧ್ಯವಿರುವ ಎಲ್ಲಾ ಕಡೆಗಳಲ್ಲಿ ಈ ನಾಲ್ಕೂ ಪಕ್ಷಗಳ ಮುಖಂಡರು ಭಾಗವಹಿಸುವ ಬೃಹತ್ ಬಹಿರಂಗಸಭೆಗಳನ್ನು ಸಹ ನಡೆಸಲು ತನ್ನ ಎಲ್ಲಾ ಜಿಲ್ಲಾ ಘಟಕಗಳಿಗೆ ಹೋರಾಟ ಸಮಿತಿಯ ಪರವಾಗಿ ಕಾಂ. ಎಂ.ಸಿ. ವೆಂಕಟರಾಮು ವಿನಂತಿಸಿದ್ದಾರೆ.

○

ಹುಟ್ಟಿನಿಂದಲೇ ನೋವುಣ್ಣುವ ಜನಾಂಗದ ನಾಯಕ

[3ನೇ ಪುಟದಿಂದ]

ಅಂಬೇಡ್ಕರ್ ಜಯಂತಿ

ಏಪ್ರಿಲ್ 14 ಅಂಬೇಡ್ಕರ್ ಜಯಂತಿಯ ದಿನ. ಆದರೆ ಕಾಂಗ್ರೆಸ್ ಪಕ್ಷ ಹಾಗೂ ಇತರೆ ಅನೇಕ ಸಂಘಟನೆಗಳು ಅಂಬೇಡ್ಕರ್ ಜಯಂತಿಯನ್ನು ಆಚರಿಸುವ ರೀತಿ, ಹಾಗೂ ಅವರ ನಡೆನುಡಿಗಳು ಅಂಬೇಡ್ಕರರ ವಿಚಾರ ಸರಣಿಗೂ, ಆಕಾಂಕ್ಷೆಗಳಿಗೂ ವ್ಯತಿರಿಕ್ತವಾಗಿವೆ. ಯಾವ ಜನಾಂಗದ ನಾಯಕನಾಗಿ ಕೊನೆಯುಸಿರವರೆಗೂ ತಮ್ಮ ಜೀವಸವೆಸಿದರೋ ಆ ಜನಾಂಗವನ್ನೇ ಕಾಲಡಿಯಲ್ಲಿಟ್ಟು ತುಳಿಯಲು ಅಂಬೇಡ್ಕರ್ ಹೆಸರನ್ನು ಉದ್ಘೋಗಿಸಲಾಗುತ್ತಿದೆ. ಯಾರು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಎನ್ನುವ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಆದರ್ಶಹೊತ್ತು ಸಂವಿಧಾನವನ್ನು ಬರೆದರೋ ಅವರನ್ನೇ ಸಂವಿಧಾನದ ಕರ್ತ ಎಂದು ಹೊಗಳುತ್ತಲೇ ಅದೇ ಸಂವಿಧಾನವನ್ನು ನಾಶಗೊಳಿಸಿ ಸರ್ವಾಧಿಕಾರವನ್ನು ಸ್ಥಾಪಿಸಲಾಗುತ್ತಿದೆ. ಯಾವ ಅಂಬೇಡ್ಕರ್ ತಮ್ಮ ರಕ್ತ ಕಣಕಣದಲ್ಲೂ ದ್ವೇಷಿಸಿ, ಮನುಸ್ಮೃತಿಯನ್ನು ಸುಟ್ಟರೋ ಅದೇ ಅಂಬೇಡ್ಕರ್‌ರವರಿಗೆ 'ಅಭಿನವ ಮನು' ಎನ್ನುವ ಕಿರೀಟವಿಟ್ಟು ಪೂಜಿಸಲಾಗುತ್ತಿದೆ.

ಏಪ್ರಿಲ್ 14 ಸಾರ್ವಜನಿಕ ರಜಾ ದಿನವಾದ ಮಾತ್ರಕ್ಕಾಗಲಿ, ಊರೂರಲ್ಲಿ ಅಂಬೇಡ್ಕರ್ ಪ್ರತಿಮೆಗಳನ್ನು ನಿಲ್ಲಿಸಿದ ಮಾತ್ರಕ್ಕಾಗಲಿ ಅಥವಾ ಅಂಬೇಡ್ಕರ್ ಭಾವಚಿತ್ರವನ್ನು ರಾಷ್ಟ್ರನಾಯಕರ ಅಗ್ರಪಂಕ್ತಿಯಲ್ಲಿಟ್ಟು ಪೂಜಿಸುವುದರಿಂದಾಗಲಿ ಅಂಬೇಡ್ಕರರ ಆಕಾಂಕ್ಷೆಗಳನ್ನು ಈಡೇರಿಸಿದಂತಾಗುವುದಿಲ್ಲ.

ಮಾನವ ವಿಮೋಚನೆಗಾಗಿ ಶ್ರಮಿಸುವ ಪ್ರತಿಯೊಬ್ಬ ಕ್ರಾಂತಿಕಾರಿಯನ್ನೂ ಅವನ ಜೀವನ ಕಾಲದಲ್ಲಿ ಕ್ರೂರವಾಗಿ ವಿರೋಧಿಸಿ ನತ್ತನಂತರ ಅವನ ವಿಚಾರಗಳನ್ನು ತಮಗೊಪ್ಪಿಗೆಯಾಗುವಂತೆ ವಿಕೃತಗೂಳಿಸಿ, ಮೊಂಡುಗೊಳಿಸಿ, ಅಸಂಬದ್ಧವಾಗಿ ಹೊಗಳಿ ಹಾಡುವುದು ಆಳುವವರ್ಗಗಳ ಸಹಜ ಸ್ವಭಾವವಾಗಿದೆ.

ನಮ್ಮ ದೃಷ್ಟಿ :

ನಮ್ಮ ಪಾಲಿಗೆ ಅಂಬೇಡ್ಕರ್ ಜಯಂತಿ ಪ್ರಜಾಸತ್ತಾತ್ಮಕ ನವಸಮಾಜ ನಿರ್ಮಾಣಕ್ಕೆ ಈ ಮಹಾನಾಯಕ ಸಲ್ಲಿಸಿದ ಸೇವೆಯನ್ನು ನೆನೆಸಿಕೊಂಡು, ಮುಂದೆ ಸಾಗಲು ಅವರ ವಿಚಾರ ದೃಷ್ಟಿಕೋನಗಳನ್ನು ವಿಮರ್ಶಾತ್ಮಕವಾಗಿ ನೋಡಿ ಕಲಿಯುವ ಒಂದು ಸಂದರ್ಭವಾಗಿದೆ. ಹುಟ್ಟಿನಿಂದಲೇ ನೋವುಣ್ಣುವ ಜನಾಂಗದ ಬಾಯಿ ಕಣ್ಣು ಮೆದುಳುಗಳಾಗಿ ಭಾರತದ ಮಿಲಿಯಾಂತರ ದಲಿತರ ವಿಮೋಚನೆಗೂ, ಪ್ರಜಾಸತ್ತಾತ್ಮಕ ಜೀವನದ ನಿರ್ಮಾಣಕ್ಕೂ ಸಲ್ಲಿಸಿದ ಸೇವೆಯನ್ನು ಮಾನ್ಯಮಾಡಲೇಬೇಕು; ಹಾಗೂ ಅಂಬೇಡ್ಕರರ ಪ್ರಗತಿಪರ, ಕ್ರಾಂತಿಕಾರಿ ಸತ್ವವನ್ನು ನಾವು ಪ್ರತಿನಿಧಿಸಿ ಮುಂದುವರೆಸಬೇಕು. ಆದರೆ ಸ್ವಾರ್ಥ ಹಿತಾಸಕ್ತಿಯಿಂದ ಬೂಟಾಟಿಕೆಯ ಹೊಗಳುಭಟ್ಟಂಗಿಗಳಾಗುವುದಾಗಲಿ ಅಥವಾ ಕುರುಡು ವ್ಯಾಮೋಹದಿಂದ ಅವರ ಸೀಮಿತತೆಯನ್ನೂ, ದೌರ್ಬಲ್ಯಗಳನ್ನೂ ಅರಿಯಲು ತಿರಸ್ಕರಿಸುವುದಾಗಲಿ ಅಂಬೇಡ್ಕರರ ದಲಿತ ವಿಮೋಚನೆಯ ಆಕಾಂಕ್ಷೆಗಳಿಗೆ ದ್ರೋಹ ಬಗೆಯುವುದಾಗಿದೆ. 'ಧರ್ಮ ಸಮಾಜದ ನೆಲೆಗಟ್ಟು' ಎನ್ನುವ ಅವರ ವಿಚಾರಗಳು, ಅಥವಾ ಅವರ ಸಂವಿಧಾನಾತ್ಮಕ ಭ್ರಮೆಗಳು ಇತ್ಯಾದಿಗಳು ದೋಷಪೂರಿತವಾದವುಗಳು ಎನ್ನುವುದನ್ನು ನಾವು ಅರಿಯಬೇಕು. ಅಂಬೇಡ್ಕರ್ ಕೆಲವು ಪ್ರಾಮುಖ್ಯ ಹೋರಾಟದ ಹರಿವುಗಳನ್ನು ಕಡೆಗಣಿಸಿದ್ದರೆನ್ನುವುದನ್ನೂ, ದಲಿತ ಹೋರಾಟ ಜಮೀನ್ದಾರಶಾಹಿ ಬಂಡವಾಳಶಾಹಿ ವಿರೋಧಿ ಹೋರಾಟದೊಂದಿಗೆ, ವರ್ಗಹೋರಾಟದೊಂದಿಗೆ ಬೆಸೆಯಬೇಕೆಂಬುದನ್ನೂ, ಅದಿಲ್ಲದೆ ದಲಿತ ವಿಮೋಚನೆ ಸಾಧ್ಯವಾಗುವುದಿಲ್ಲ ಎನ್ನುವುದನ್ನೂ ನಾವು ಅರಿಯಬೇಕು. ಸ್ವಾತಂತ್ರ್ಯಹೋರಾಟದ ಬಗೆಗೆ ಅವರ ನಿರಾಸಕ್ತಿ ಹಾಗೂ ಸ್ವಾತಂತ್ರ್ಯಹೋರಾಟ ಕಾಲದಲ್ಲಿ ಅವರು ಬ್ರಿಟಿಷ್ ವೈಸರಾಯ್ ಮಂತ್ರಿಮಂಡಳದ ಸದಸ್ಯರಾಗಿದ್ದುದು ಇವೆಲ್ಲವನ್ನೂ ನಾವು ವಿಮರ್ಶಾತ್ಮಕ ಬುದ್ಧಿಯಿಂದ ಪರಿಶೀಲಿಸಬೇಕು. ಇದೇನೂ ಅಂಬೇಡ್ಕರರವರ ಪ್ರಾಮಾಣಿಕತೆಯ ಬಗೆಗೆ ಪ್ರಶ್ನಿಸುವುದಲ್ಲ. ಮೇಲಿನವರ ಸುಖ, ಸಂಪತ್ತು ಅಂತಸ್ತುಗಳ ಕೆಳಗೆ ಸಾವಿರವರ್ಷಗಳ ಕಾಲ ನರಳಿ, ಜಜ್ಜಿಹೋಗಿ ಕೈಕಾಲು ಮುರಿದುಹೋದ,ಸರ್ವಾಂಗಗಳೂ ಊನವಾದ ತನ್ನ ಜನಾಂಗವನ್ನು ನಡೆಸಲು ಸರ್ವರೂ ಶತ್ರುಗಳಾಗಿ ವರ್ತಿಸುವ ಪರಿಸ್ಥಿತಿಯಲ್ಲಿನ ಕೋಟಿ ಕಷ್ಟಗಳ ಹಿನ್ನೆಲೆಯಲ್ಲಿ ನಾವು ಅಂಬೇಡ್ಕರರವರನ್ನು ಅರ್ಥೈಸಿಕೊಳ್ಳಬೇಕು.

●

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ದಲಿತ ಯುವತಿಯ ಕೊಲೆ?

ದ.ಕ. ಜಿಲ್ಲೆಯ ಸುಳ್ಯ ನಗರಸಭೆ ವ್ಯಾಪ್ತಿಯಲ್ಲಿರುವ ಬೂಡಿನ ಶ್ರೀ ಐತ್ತನವರ ಮಗಳು 18 ವರ್ಷದ ಅಮ್ಮಣ್ಣಿ 15-3-81ರಂದು ಕಾಡಿಗೆ ಸೌದೆ ತರಲು ಹೋಗಿ ವಾಪಸು ಬರಲಿಲ್ಲ. ಕಾಡಿಗೆ ಹೋದಾಗ ಅರಣ್ಯ ಇಲಾಖೆಯ ಸಿಬ್ಬಂಧಿ ವರ್ಗದವರು ಸೌದೆ ತರಲು ಹೋದವರನ್ನು ಓಡಿಸಿಕೊಂಡು ಹೋದರೆಂದು ಅಮ್ಮಣ್ಣಿ ಜೊತೆಗೋದವರು ಹೇಳುತ್ತಾರೆ. ಆಗಿನಿಂದ ಅಮ್ಮಣ್ಣಿ ನಾಪತ್ತೆಯಾದಳು. ಮರುದಿನ ಹೆತ್ತವರ ದೀರ್ಘ ಪ್ರಯತ್ನದ ನಂತರ ಪಯಸ್ವಿನಿ ನದಿಯಲ್ಲಿ ಅಮ್ಮಣ್ಣಿಯ ಶವ ದೊರಕಿದೆ. ಒಂದೇ ದಿನದ ಹಿಂದೆ ಕಾಣೆಯಾದವಳ ಶವ ನದಿಯಲ್ಲಿ ದೊರೆತಾಗ 48 ಘಂಟೆಗಳ ಹಿಂದೆ ಶೀರಿಕೊಂಡವಳೆಂದು ಸುಳ್ಯದ ವೈದ್ಯಾಧಿಕಾರಿಗಳು ಶಿಫಾರಸು ಪತ್ರ ನೀಡಿದ್ದಾರೆ.

ಈ ಸಂಶಯಾತ್ಮಕ ಸಾವಿನ ತನಿಖೆಗಾಗಿ ಒತ್ತಾಯಿಸಲು 21-3-81 ರಂದು 500ಕ್ಕಿಂತಲೂ ಹೆಚ್ಚು ದಲಿತರು ದಲಿತ ಸಂಘರ್ಷ ಸಮಿತಿ, ಸಮುದಾಯ ಇವುಗಳ ನೇತೃತ್ವದಲ್ಲಿ ಕಪ್ಪು ಬಾವುಟ ಹಿಡಿದು ಮೌನ ಮೆರವಣಿಗೆ ಹೊರಡಿಸಿ ಸುಳ್ಯ ತಹಸೀಲ್ದಾರರಿಗೆ ಮತ್ತು ಪೋಲೀಸ್ ಇಲಾಖೆಗೆ ಮನವಿ ಅರ್ಪಿಸಿದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಕಾಂ. ಬಿ. ರಾಮಕೃಷ್ಣ ಮಾತನಾಡಿ, ಈ ಆತ್ಮಹತ್ಯೆಗಳ ಹಣೆಪಟ್ಟಿಯ ಹಿಂದೆ ನಿಂತಿರುವ ದುಷ್ಟ ಶಕ್ತಿಗಳನ್ನು ಬಯಲಿಗೆಳೆದು, ಈ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಸಿದ್ಧರಾಗಲು ಕರೆಕೊಟ್ಟರು.

ಸಮುದಾಯದ ಎಸ್. ಸುಬ್ರಹ್ಮಣ್ಯ ಭಟ್, ಕಾಂ. ನಾರಾಯಣ ಭಟ್ ಮತ್ತು ಕಾಂ. ಸರಸ್ವತಿ ಮೊದಲಾದವರು ಮಾತನಾಡಿ ಈ ಘಟನೆಯ ಬಗ್ಗೆ ಯೋಗ್ಯ ತನಿಖೆಯಾಗಬೇಕೆಂದು ಒತ್ತಾಯಿಸಿದರು.

○

ರಾಯಚೂರು

ಎಸ್.ಎಫ್.ಐ. ರಾಯಚೂರು ಘಟಕವು ಶೈಕ್ಷಣಿಕ ವರ್ಷದ ಆರಂಭದಲ್ಲಿ ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ತರಗತಿಗಳನ್ನು ಏರ್ಪಡಿಸಿತ್ತು. ಏಪ್ರಿಲ್ 3ರಂದು ಈ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಯಿತು. ರಾಯಚೂರಿನ ಜೆ.ಎಂ.ಎ. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಶಾಂತರಸರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದರು. ಸಮಾರಂಭ ಯಶಸ್ವಿಯಾಗಿ ನೆರವೇರಿತು.

●

ಖಾಸಗಿ ಮಾಧ್ಯಮಿಕ ಶಾಲಾ ನೌಕರರ ಹೋರಾಟ

(2ನೇ ಪುಟದಿಂದ)

ವನ್ನು ಮುರಿಯಲು ಹೊಂಚುಹಾಕಿದವು. ಇಂಥ ಸಂದರ್ಭದಲ್ಲಿ ಧಾರವಾಡ ಎಸ್.ಎಫ್.ಐ. ಘಟಕವು ಹೈಸ್ಕೂಲ್ ವಿದ್ಯಾರ್ಥಿಗಳ ಬೆಂಬಲವನ್ನು ಹೋರಾಡುತ್ತಿರುವ ಶಿಕ್ಷಕರಿಗೆ ದೊರಕಿಸಿಕೊಡಲು ಮುಂದಾಯಿತು. ಸಾಲ್ಮೈದು ಹೈಸ್ಕೂಲ್‌ಗಳನ್ನು ನಿಯಂತ್ರಿಸುತ್ತಿರುವ ಮಠೀಯ ಶಕ್ತಿಗಳನ್ನು ಸೋಲಿಸಲು ಎಸ್.ಎಫ್.ಐ. ಪಣ ತೊಟ್ಟಿತು. ಶಾಲಾ ವಿದ್ಯಾರ್ಥಿಗಳು ಸಹ ಹೋರಾಡುತ್ತಿರುವ ಶಿಕ್ಷಕರ ಬೆಂಗಾವಲಿಗೆ ನಿಂತರು. ಸತತ ಐದು ದಿವಸಗಳ ಕಾಲ ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ "ವರ್ಗಗಳನ್ನು ಬಹಿಷ್ಕರಿಸಿ" ಶಿಕ್ಷಕರ ಹೋರಾಟವನ್ನು ನೂರಕ್ಕೆನೂರು ಅಂಶ ಯಶಸ್ವಿಗೊಳ್ಳಲು ಸಹಕರಿಸಿ ಶ್ರಮಿಸಲಾಯ್ತು.

ಎಸ್.ಎಫ್.ಐ.ನ ಸಕಾಲಿಕ ಸಹಾಯ

ಪರೀಕ್ಷಾಕಾಲ ಸಮೀಪಿಸಿರುವಾಗ ವಿದ್ಯಾರ್ಥಿಗಳನ್ನು ಶಿಕ್ಷಕರ ವಿರುದ್ಧ ಎತ್ತಿಕಟ್ಟಬಹುದೆಂಬ ಶಂಕೆ ಎಸ್.ಎಫ್. ಐ. ಗೆ ಇದ್ದೇ ಇತ್ತು. ಆದ್ದರಿಂದ ಮೊದಲೆ "ಶಿಕ್ಷಕರ ಒಳಗಿದ್ದೇ ಹೋರಾಟ" ಪ್ರಾರಂಭಗೊಳ್ಳುವ ಮುನ್ನ ಹುಬ್ಬಳ್ಳಿಯಲ್ಲೊಂದು ಧಾರವಾಡದಲ್ಲೊಂದು ದಿನ 9-3-81 ಮತ್ತು 10-3-81ರಂದು ಹೈಸ್ಕೂಲು ವಿದ್ಯಾರ್ಥಿಗಳ ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಗಳನ್ನು ಸಂಘಟಿಸಿ ಹೋರಾಟಕ್ಕೆ ಹೋಗಲಿರುವ ಶಿಕ್ಷಕರಿಗೆ ಬೆಂಬಲ ಸೂಚಿಸಲಾಯ್ತು. ಕಾಂ. ರುದ್ರಪ್ಪ ಕಾಯಿ, ಕಾಂ. ಶಿವಶಂಕರಯಡ್ರಾಮಿ, ಕಾಂ. ವಿ. ಆರ್. ರೆಡ್ಡಿ, ಕಾಂ. ಪಿ. ಉಷಾ, ಕಾಂ. ಜಿ. ಎ. ಹಿರೇಮಠ, ಕಾಂ. ಮೈಲಾರಿ, ಕಾಂ. ಹಳ್ಳಿ ಮುಂತಾದವರು ಎಸ್.ಎಫ್.ಐ. ಅಡಿಯಲ್ಲಿ ಹೈಸ್ಕೂಲು ವಿದ್ಯಾರ್ಥಿಗಳನ್ನು ಅತೀ ಯಶಸ್ವೀ ರೀತಿಯಲ್ಲಿ ಸಂಘಟಿಸಿ ಹೋರಾಡುತ್ತಿರುವ ಶಿಕ್ಷಕರಿಗೆ ಬೆಂಬಲ ಒದಗಿಸಿಕೊಡಲು ಶ್ರಮಿಸಿದರು. ಇದೇ ರೀತಿಯಲ್ಲಿ ಸೌಂದತ್ತಿ ಮತ್ತು ಶಿತಂನಾಳದಲ್ಲೂ ಎಸ್.ಎಫ್. ಐ. ಕಾರ್ಯಕರ್ತರು ವಿದ್ಯಾರ್ಥಿಗಳನ್ನು ಶಿಕ್ಷಕರ ಬೆಂಬಲಾರ್ಥ "ತರಗತಿ ಬಹಿಷ್ಕಾರ" ಕಾರ್ಯಗತಗೊಳಿಸಿದರು.

'ಎಸ್.ಎಫ್.ಐ.'ದ ಜನಪ್ರಿಯತೆ

ಹೈಸ್ಕೂಲು ವಿದ್ಯಾರ್ಥಿಗಳ ಮಧ್ಯ ಈಗ ಎಸ್.ಎಫ್.ಐ. ತುಂಬ ಪ್ರಿಯ. ಹೈಸ್ಕೂಲು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಎಸ್. ಎಫ್. ಐ. ನೇತೃತ್ವದಲ್ಲಿ ಹೋರಾಡಲು ಅವರೀಗ ಸಿದ್ಧ. ಅದೇ ರೀತಿ ಹೈಸ್ಕೂಲ ಶಿಕ್ಷಕರಲ್ಲೂ ಎಸ್.ಎಫ್. ಐ. ಈಗ ತುಂಬ ಪ್ರಿಯ. ತಮ್ಮ ಹೋರಾಟಕ್ಕೆ ಬೆಂಗಾವಲಾಗಿ ನಿಂತದ್ದಕ್ಕೆ ಉಪಕೃತ್ಯ. ಹೈಸ್ಕೂಲ ಶಿಕ್ಷಕರು-ವಿದ್ಯಾರ್ಥಿಗಳು ಅನೇಕ ಸಾಮಾನ್ಯ ಬೇಡಿಕೆಗಳ ಬಗ್ಗೆ ಕೂಡಿ ಖಾಸಗಿ ಶಿಕ್ಷಣ ವ್ಯವಸ್ಥೆಯ ವಿರುದ್ಧ ಹೋರಾಡಬೇಕೆನ್ನುವುದು ಅಭಿಮತ. ಎಸ್. ಎಫ್. ಐ. ಯನ್ನು ಹೈಸ್ಕೂಲ ವಿದ್ಯಾರ್ಥಿಗಳ ಮಧ್ಯ ಕಟ್ಟಿ ಬೆಳೆಸಬೇಕೆನ್ನುವುದು ಧಾರವಾಡ ಎಸ್. ಎಫ್.ಐ ದ ಹೆಬ್ಬಯಕೆ.

ಶಿಕ್ಷಕರ ಹೋರಾಟಕ್ಕೂ ಮತ್ತು ಎಸ್.ಎಫ್.ಐ. ನೇತೃತ್ವದ ವಿದ್ಯಾರ್ಥಿಗಳ ಬೆಂಬಲ ಕಾರ್ಯಕ್ರಮಕ್ಕೂ ಕಾಂ. ವಿ. ಎನ್. ಹಳಕಟ್ಟಿ, ಕಾರ್ಯದರ್ಶಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಧಾರವಾಡ ಜಿಲ್ಲಾ ಸಂಘಟನಾ ಸಮಿತಿಯವರು ಸಂಪೂರ್ಣ ಬೆಂಬಲ ನೀಡಿದ್ದಲ್ಲದೆ, ಮಾರ್ಗದರ್ಶನ ಮಾಡಿದರು.

ವರದಿ : ವಿ. ಎನ್. ಹಳಕಟ್ಟಿ

ಅಸ್ಸಾಂ–ನಿಜವಾದ ವಿಚಾರ

(1ನೇ ಪುಟದಿಂದ)

ಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು, ಅಧ್ಯಕ್ಷರ ಆಳ್ವಿಕೆಯ ಸಮಯದಲ್ಲಿ ನಡೆದ ಜನವಿರೋಧಿ ಚಟುವಟಿಕೆಗಳನ್ನು ಕಟುವಾಗಿ ಟೀಕಿಸಿದ ಹೇಳಿಕೆಯನ್ನು ಹೊರಡಿಸಿ ಆ ದಿನದ ನಡವಳಿಕೆಗಳಿಗೆ ಹಾಜರಾಗಲಿಲ್ಲ.

ಈಗ ಏಳು ಪಕ್ಷಗಳ ಐಕ್ಯತೆಯನ್ನು ಪುನಃ ಸ್ಥಾಪಿಸಲು ಈಗ ಪ್ರಯತ್ನಗಳು ನಡೆಯುತ್ತಿರುವುದು ತುಂಬ ಸಂತೋಷದ ವಿಷಯ. ಆದರೆ ಒಂದು ಪ್ರಶ್ನೆ ಉಳಿದೇ ಉಳಿಯುತ್ತದೆ: ಐಕ್ಯತೆಯ ಪುನರ್‌ಸ್ಥಾಪನೆ ಯಾವ ಆಧಾರದ ಮೇಲೆ? ಕಾಂಗ್ರೆಸ್ (ಯು) ಮತ್ತು ಲೋಕದಳಗಳು ತಮ್ಮ ನಡವಳಿಕೆಯನ್ನು ಮತ್ತೆ ಪರಿಶೀಲಿಸಿಕೊಂಡು ಚಳುವಳಿಗೆ ಬೆಂಬಲ ಕೊಡುತ್ತಿರುವವರ ಜೊತೆ ಸಂಬಂಧಗಳನ್ನು ಕಡಿದುಕೊಳ್ಳುವರೇ ? ಆಳುತ್ತಿರುವ ಕಾಂಗೈ ಸರ್ಕಾರ ಮತ್ತು ಚಳುವಳಿಗಾರರೊಂದಿಗೆ ಸೇರಿಕೊಂಡಿರುವ ಜನತಾ ನೇತೃತ್ವದ ವಿರೋಧ ಪಕ್ಷಗಳ ನಡುವೆ ಆಯ್ಕೆಮಾಡುವಂತದೇನೂ ಇಲ್ಲ ಎಂಬುದನ್ನು ಸಿ.ಪಿ.ಐ., ಆರ್.ಸಿ.ಪಿ.ಐ., ಆರ್.ಎಸ್.ಪಿ. ಮತ್ತು ಎಸ್.ಯು.ಸಿ.ಗಳು ಸ್ಪಷ್ಟಮಾಡಿಕೊಳ್ಳುತ್ತವೆಯೋ ? ಈ ಪಕ್ಷಗಳ ಅಖಿಲ ಭಾರತ ನಾಯಕರಿಗೆ ನಾನು ಆಲೋಚಿಸುವಂತೆ, ಚಳುವಳಿಗಾರರ ವಿರುದ್ಧ ಹೋರಾಟದ ಆಧಾರದ ಮೇಲೆ ಐಕ್ಯತೆಯ ಪುನರ್‌ಸ್ಥಾಪನೆಗೆ ಸಹಾಯಮಾಡುವಂತೆ ನಾನು ಮನವಿಮಾಡಿಕೊಳ್ಳುತ್ತೇನೆ.

ಅಸ್ಸಾಂ ಜನತೆ ಮತ್ತು ಅದಕ್ಕೆ ಸಹಾಯಮಾಡುತ್ತಿರುವ ಅಖಿಲ ಭಾರತ ರಾಜಕೀಯ ಪಕ್ಷಗಳ ಮುಂದಿರುವ ಪ್ರಶ್ನೆ ಎಂದರೆ ರಾಜ್ಯವನ್ನು ಯಾವ ಪಕ್ಷ ಅಥವಾ ಪಕ್ಷಗಳು ಆಳಬೇಕು ಎಂಬುದಲ್ಲ. ಈಗಿನ ಅಸ್ಸಾಂ ಮತ್ತು ಅದರ ಜನತೆಯನ್ನು ಹೇಗೆ ಐಕ್ಯವಾಗಿ ಉಳಿಸುವುದು ಎಂಬುದು. ಏಕೆಂದರೆ ಚಳುವಳಿಕಾರರು ಮತ್ತು ಕಾಂಗ್ರೆಸ್ (ಐ) ಈಗೆ ಮಾಡುವುದನ್ನೇ ಮುಂದುವರೆಸಿದರೆ ಅಸ್ಸಾಂ ತುಂಬ ಕಷ್ಟಪಡಬೇಕಾಗುತ್ತದೆ. ವಿದೇಶೀಯರ ಮೇಲೆ ನಡೆಸುತ್ತಿರುವ ಚಳುವಳಿ ಶಾಂತಿಯುತವಾಗಿಲ್ಲ. ಭಾಷಿಕ, ಧಾರ್ಮಿಕ ಮತ್ತು ಇತರ ಅಲ್ಪಸಂಖ್ಯಾತರ ವಿರುದ್ಧದ ಹಿಂಸಾತ್ಮಕ ಚಳುವಳಿ ಇವಾಗಿದೆ. ಈ ಅಸ್ಸಾಂ ಜನತೆಯೊಳಗೆ ಇರುವ ಪ್ರಜಾಪ್ರಭುತ್ವವಾದಿ ಮತ್ತು ಎಡ ಅಂಶಗಳ ವಿರುದ್ಧ ಈಗ ಚಳುವಳಿ ತಿರುಗಿದೆ.

ಕಾಂಗೈನ ಮೂರುವರೆ ತಿಂಗಳ ಸರ್ಕಾರ, ಅಸ್ಸಾಂ ಜನತೆಯನ್ನು ಇನ್ನಷ್ಟು ಒಡೆದಿದೆ. ಅಧಿಕಾರದಲ್ಲಿ ಉಳಿಯಲು ಅದು ನೀಚ ವಿಧಾನಗಳನ್ನು ಅನುಸರಿಸುತ್ತಿದೆ.

ಬೂರ್ಜ್ವಾ ವಿರೋಧ ಪಕ್ಷಗಳು ಬಾರ್ಬರ, ಹಜಾರಿಕಾ ಸರ್ಕಾರಗಳ ಹೊಸ ಆವೃತ್ತಿಯನ್ನೇ ಪುನರ್ ಸ್ಥಾಪಿಸಲು ಪ್ರಯತ್ನಿಸುತ್ತಿವೆ. ಇದು ಕಾಂಗೈ ಸರ್ಕಾರದ ಅಧಿಕಾರದಲ್ಲಿ ಉಳಿಯುವ ಸನ್ನಾಹದಷ್ಟೇ ಕೆಟ್ಟದ್ದು. ಅಸ್ಸಾಂ ಮತ್ತು ಹೊರಗಡೆ ಇರುವ ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಮಾಡಬೇಕಾಗಿರುವ ಕೆಲಸ ಎಂದರೆ ಭಾಷಿಕ, ಧಾರ್ಮಿಕ, ಅಲ್ಪಸಂಖ್ಯಾತರೆಲ್ಲರ ಐಕ್ಯತೆಯ ಆಧಾರದ ಮೇಲೆ ಒಗ್ಗಟ್ಟಾಗುವುದು. ಇದಾಗದಿದ್ದರೆ ವಿದೇಶೀಯರ ಸಮಸ್ಯೆಯೂ ನಿವಾರಣೆಯಾಗುವುದಿಲ್ಲ.

●

ಮತ್ತೆ ಗೋಳಿಬಾರ್

(1ನೇ ಪುಟದಿಂದ)

ಗೋಳಿಬಾರನ್ನು ಪ್ರತಿಭಟಿಸಿ ಉತ್ತರ ಕರ್ನಾಟಕದ ಅನೇಕ ಕಡೆ ಬಂದ್ ಆಚರಿಸಲಾಗಿದೆ. ಬಿಜಾಪುರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತಿತರ ಪಕ್ಷಗಳು ಬಂದ್ ಕರೆಕೊಟ್ಟು ಬಂದ್ ಆಚರಿಸಿದಾಗ ಅನೇಕ ಜನರನ್ನು ಬಂಧಿಸಿದ್ದಾರೆ.

ಈ ಹೀನ ಕೃತ್ಯವನ್ನು ಗುಂಡೂರಾವ್ ಸಮರ್ಥಿಸಿಕೊಂಡಿದ್ದಾರೆ. ಲೋಕಸಭೆಯಲ್ಲಿ ವಿರೋಧಿ ಪಕ್ಷದ ಸದಸ್ಯರು ನಿಪ್ಪಾಣಿ ಗೋಳಿಬಾರನ್ನು ಪ್ರಸ್ತಾಪಿಸಲೆತ್ನಿಸಿದಾಗ, ಪ್ರಶ್ನೋತ್ತರದ ಸಮಯದಲ್ಲಿ ಬೇರೆ ವಿಷಯಗಳನ್ನು ಪ್ರಸ್ತಾಪಿಸಕೂಡದೆಂದು ಆಳುವ ಪಕ್ಷದವರ ಪಟ್ಟು. 10 ಜನ ಮಣ್ಣಿನ ಮಕ್ಕಳು ಗುಂಡೇಟಿನಿಂದ ಸತ್ತರೆ ಇದು ಬೇರೆ ವಿಷಯ! ಇದು ಕಾಂಗೈ ಸದಸ್ಯರ ನಿಲುವು!

ಹೋರಾಟಗಳನ್ನು ದಬ್ಬಾಳಿಕೆಯಿಂದ ಹತ್ತಿಕ್ಕುವ ರಾಜ್ಯಸರಕಾರದ ಯತ್ನ ಖಂಡನೀಯ. ಸರಕಾರದ ಈ ಕೃತ್ಯವನ್ನು ಪ್ರತಿಭಟಿಸಲೇಬೇಕು. ಜನವಿರೋಧಿ ಸರಕಾರಕ್ಕೆ ತಕ್ಕ ಪಾಠ ಕಲಿಸಬೇಕಾದ ಅವಶ್ಯಕತೆ ತೀವ್ರವಾಗಿದೆ.

ಪಕ್ಷದ ಎಲ್ಲ ಘಟಕಗಳೂ ಗೋಳಿಬಾರನ್ನು ಖಂಡಿಸಿ ಮತಪ್ರದರ್ಶನ ವ್ಯವಸ್ಥೆಮಾಡಬೇಕೆಂದು ಕಾಂ. ಎಂ. ಕೆ. ಭಟ್‌ರು ಕರೆಕೊಟ್ಟಿದ್ದಾರೆ.

○

ಸಂಪಾದಕೀಯ

(1ನೇ ಪುಟದಿಂದ)

ಸರಿಯಾದ ರೀತಿಯಲ್ಲಿ ಯೋಚನೆಮಾಡುವ ಪ್ರತಿಒಬ್ಬನಿಗೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷವು ಸಾಮ್ರಾಜ್ಯಶಾಹಿಯ ಸತತ ವಿರೋಧಿಗಳು ಮತ್ತು ನಿಜವಾದ ರಾಷ್ಟ್ರಪ್ರೇಮಿಗಳೆಂದು ಗೊತ್ತಿದೆ. ರಾಷ್ಟ್ರಭಕ್ತಿಯನ್ನು ದಿನವೂ ಬೋಧಿಸುವ ಅದ್ವಾನಿಯವರ ಪಕ್ಷವು ದೇಶದಾದ್ಯಂತ ನಡೆಯುತ್ತಿರುವ ಮತೀಯ ಗಲಭೆಗಳಿಗೆ ಕಾರಣವೆಂದೂ, ಮತೀಯ ಆಧಾರದ ಮೇಲೆ ಜನತೆಯನ್ನು ವಿಭಾಗಿಸುವುದಲ್ಲದೇ ಪ್ರಾಂತೀಯ ಭಾವನೆಗಳಿಗೆ ಪ್ರೋತ್ಸಾಹ ನೀಡಿ ದೇಶವನ್ನು ವಿಭಾಗಿಸುವ ಪ್ರಯತ್ನಮಾಡುತ್ತಿದೆ. ಇದು ರಾಷ್ಟ್ರವಿರೋಧಿ ಚಟುವಟಿಕೆ ಮತ್ತು ಸಾಮ್ರಾಜ್ಯಶಾಹಿಗಳಿಗೆ ಪ್ರೋತ್ಸಾಹ ನೀಡುವುದಲ್ಲದೇ ಬೇರೆ ಏನೂ ಅಲ್ಲ. ಸಾಮ್ರಾಜ್ಯಶಾಹಿ ಶಕ್ತಿಗಳೊಂದಿಗೆ ಹೋರಾಟಮಾಡಲು ಎಲ್ಲ ವಿಭಾಗದ ಜನತೆಯನ್ನು ಒಂದುಗೂಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮಾಡುತ್ತಿದೆ. ಅಷ್ಟೇ ಅಲ್ಲ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಮತ್ತು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಸತತ ಹೋರಾಟ ಮಾಡುತ್ತಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಒಂದೇ ಎಂಬುದೂ ಸರ್ವವಿದಿತ. ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಪರಿಣಾಮಕಾರಿಯಾಗಿ ಹೋರಾಟ ಮಾಡಬೇಕಾಗಿರುವ ಯುವಜನತೆಯಲ್ಲಿ ಕಮ್ಯುನಿಸ್ಟ್ ವಿರೋಧಿ ವಿಷಬೀಜ ಬಿತ್ತುತ್ತಿರುವುದು ಖಂಡನೀಯ. ಈ ಕ್ಷುದ್ರ ಮತೀಯ ಕೋಮುವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳಿಂದ ದೇಶವನ್ನು ರಕ್ಷಿಸುವ ಪ್ರಯತ್ನಮಾಡಬೇಕಾಗಿದೆ.

○

ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯತ್ವ

ದಿನಾಂಕ 28-4-81ರ ಒಳಗೆ ಪ್ರಾಂತ ರೈತಸಂಘದ ಎಲ್ಲ ಘಟಕಗಳು ರೈತಸಂಘದ ಸದಸ್ಯತ್ವವನ್ನು ಬೇಗನೇ ಮುಗಿಸಿ ರಸೀದಿ ಪುಸ್ತಕ ಮತ್ತು ಒಬ್ಬ ಸದಸ್ಯನಿಗೆ ಹತ್ತುಪೈಸೆಯಂತೆ ಹಣವನ್ನು ಪ್ರಾಂತ ರೈತ ಸಂಘದ ಕಾರ್ಯದರ್ಶಿಯವರಿಗೆ ಕೂಡಲೇ ಕಳಿಸಬೇಕು. ರಸೀದಿ ಪುಸ್ತಕಬೇಕಾದವರು ಕೂಡಲೇ ಬರೆದು ತರಿಸಿಕೊಳ್ಳತಕ್ಕದ್ದು. ಸಂಬಂಧಪಟ್ಟ ಕಾರ್ಯಕರ್ತರು ಇವನ್ನು ಗಮನಿಸಬೇಕು.

ಎಚ್. ಮುಗುವಾಳಪ್ಪ
ಅಧ್ಯಕ್ಷ.

ಪಿ. ರಾಮಚಂದ್ರರಾವ್
ಪ್ರಧಾನಕಾರ್ಯದರ್ಶಿ.

ಮಧುರೈನಲ್ಲಿ ಇಬ್ಬರು ಎಸ್. ಎಫ್. ಐ. ಮುಖಂಡರ ಕೊಲೆ

ಮಧುರೈ ಜಿಲ್ಲೆಯ ತಿರುಪರಕುಂಡ್ರಂನ ತ್ಯಾಗರಾಜ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಸಂಘದ ಅಧ್ಯಕ್ಷ ಹಾಗೂ ಎಸ್.ಎಫ್.ಐ. ಮುಖಂಡ ಕಾಂ. ಜಂಬುಲಿಂಗಂ ಮತ್ತು ಕಾಲೇಜು ಎಸ್.ಎಫ್.ಐ. ಶಾಖೆಯ ಕಾರ್ಯದರ್ಶಿ ಕಾಂ. ಸೋಮಸುಂದರ ಎಂಬ ಇಬ್ಬರು ಎಸ್.ಎಫ್.ಐ. ಸಂಗಾತಿಗಳನ್ನು ಮಾರ್ಚ್ 31ರಂದು ಗೂಂಡಾಗಳು ಭೀಕರವಾಗಿ ಕೊಲೆಮಾಡಿದ್ದಾರೆ. ಇನ್ನೂ ಮೂವರು ಎಸ್.ಎಫ್.ಐ. ಮುಖಂಡರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ.

ಇತ್ತೀಚಿನ ವಿದ್ಯಾರ್ಥಿಸಂಘದ ಚುನಾವಣೆಯಲ್ಲಿ ಪರಾಜಯ ಹೊಂದಿದವರು ಈ ಕೃತ್ಯಕ್ಕೆ ಕಾರಣವೆಂದು ಶಂಕಿಸಲಾಗಿದೆ. ಎಸ್.ಎಫ್.ಐ. ಅಖಿಲಭಾರತ ಅಧ್ಯಕ್ಷ ಕಾಂ. ಎಂ.ಎ. ಬೇಬಿಯವರು ಮೃತರ ತಂದೆತಾಯಿಗಳನ್ನು ಭೇಟಿನೀಡಿ ಸ್ವಾಂತನಪಡಿಸಿದ್ದಾರೆ ಹಾಗೂ ತೀವ್ರ ತನಿಖೆಗೆ ರಾಜ್ಯಸರಕಾರವನ್ನು ಆಗ್ರಹಪಡಿಸಿದ್ದಾರೆ.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 652.
Editorial and managerial office : L-46, K. V. Temple Street, Sultanpet, Bangalore-560 053. Phone : 34164
EDITOR M. K. BHAT